ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಫೆಬ್ರವರಿ 27, 2022

ಸಂಪುಟ : 48 ಸಂಚಿಕೆ : 288 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## ದೇಶಾದ್ಯಂತ ಆಯುಷ್ಮಾನ್ ಡಿಜಿಟಲ್ ಯೋಜನೆ ಜಾರಿ

ನವದೆಹಲಿ, ಫೆ. 26 – ಐದು ವರ್ಷಗಳಲ್ಲಿ 1,600 ಕೋಟಿ ರೂ.ಗಳ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ಎ.ಬಿ.ಡಿ.ಎಂ.) ದೇಶಾದ್ಯಂತ ಜಾರಿಗೆ ತರಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

**1,600 ಕೋಟಿ ರೂ.ಗಳ ಯೋಜನೆಗೆ ಕೇಂದ್ರದ ಒಪ್ಪಿಗೆ**

ಕೇಂದ್ರ ಸರ್ಕಾರದ ಯೋಜನೆಯನ್ನು ನ್ಯಾಷನಲ್ ಹೆಲ್ತ್ ಅಥಾರಿಟಿ (ಎನ್.ಹೆಚ್.ಎ.) ಜಾರಿಗೆ ತರಲಿದೆ.

ಈ ಯೋಜನೆಯ ಮೂಲಕ ದೇಶದ ಜನರು ಆಯುಷ್ಮಾನ್ ಭಾರತ್ ಆರೋಗ್ಯ ಖಾತೆ ಸಂಖ್ಯೆ ಹೊಂದಲಿದ್ದಾರೆ. ಈ ಸಂಖ್ಯೆಗೆ ಜನರ ಡಿಜಿಟಲ್ ಆರೋಗ್ಯ ದಾಖಲೆಗಳನ್ನು ಜೋಡಿಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಇದರಿಂದ ಜನರ ಆರೋಗ್ಯ ದಾಖಲೆಗಳನ್ನು ಸುಲಭವಾಗಿ ಪಡೆಯಲು ಹಾಗೂ ಚಿಕಿತ್ಸೆ ನೀಡಲು ನೆರವಾಗಲಿದೆ. ಟೆಲಿಮೆಡಿಸಿನ್ ಹಾಗೂ ಆರೋಗ್ಯ ಸೇವೆಯ ರಾಷ್ಟ್ರೀಯ ಪೋರ್ಟೆಬಿಲಿಟಿಗೂ ಯೋಜನೆ ನೆರವಾಗಲಿದೆ.

# ವೈದ್ಯಕೀಯ ಶಿಕ್ಷಣದಲ್ಲಿ ಖಾಸಗಿ ಹೂಡಿಕೆಗೆ ಪ್ರಧಾನಿ ಮೋದಿ ಕರೆ

ನವದೆಹಲಿ, ಫೆ. 26 – ಭಾಷಾ ಅಂತರದ ಹೊರತಾಗಿಯೂ ದೇಶದ ಹಲವಾರು ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕಾಗಿ ಹಲವಾರು ಸಣ್ಣ ದೇಶಗಳಿಗೆ ತೆರಳುತ್ತಿದ್ದಾರೆ ಎಂದು ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ವೈದ್ಯಕೀಯ ಶಿಕ್ಷಣ ವಲಯದಲ್ಲಿ ಖಾಸಗಿ ವಲಯ ದೊಡ್ಡ ಪ್ರಮಾಣದಲ್ಲಿ ಬರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ.

ಆರೋಗ್ಯ ವಲಯದ ಕುರಿತ ಬಜೆಟ್ ಘೋಷಣೆಗಳ ಬಗ್ಗೆ ಆಯೋಜಿಸಲಾಗಿದ್ದ ವೆಬಿನಾರ್ ಉದ್ಘಾಟಿಸಿ ಮಾತನಾಡುತ್ತಿದ್ದ ಪ್ರಧಾನಿ, ವೈದ್ಯಕೀಯ ಶಿಕ್ಷಣಕ್ಕಾಗಿ ಜಮೀನು ಒದಗಿಸಲು ರಾಜ್ಯ ಸರ್ಕಾರಗಳು ಉತ್ತಮ ನೀತಿಗಳನ್ನು

**ಭಾಷಾ ಅಂತರದ ಹೊರತಾಗಿಯೂ ವೈದ್ಯಕೀಯ ಶಿಕ್ಷಣಕ್ಕಾಗಿ ಸಣ್ಣ ದೇಶಗಳಿಗೆ ಜನರು ತೆರಳುತ್ತಿರುವುದನ್ನು ತಡೆಯಬೇಕೆಂದ ಮೋದಿ**

ಹೊಂದಬೇಕು. ಇದರಿಂದ ಭಾರತ ದೊಡ್ಡ ಸಂಖ್ಯೆಯಲ್ಲಿ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಹೊಂದಲು ಸಾಧ್ಯವಾಗುತ್ತದೆ. ಭಾರತವಷ್ಟೇ ಅಲ್ಲದೇ ವಿಶ್ವದ ಬೇಡಿಕೆಯನ್ನೂ ಈಡೇರಿಸಲು ಸಾಧ್ಯವಿದೆ ಎಂದು ಮೋದಿ ಹೇಳಿದ್ದಾರೆ.

ಸಮರ ಪೀಡಿತ ಉಕ್ರೇನ್‌ನಲ್ಲಿ ಭಾರತದ ವೈದ್ಯಕೀಯ ವಿದ್ಯಾರ್ಥಿಗಳು ಅತಂತ್ರರಾಗಿರುವ ಹಿನ್ನೆಲೆಯಲ್ಲಿ ಪ್ರಧಾನಿ ಹೇಳಿಕೆ ಪ್ರಾಮುಖ್ಯತೆ ಪಡೆದಿದೆ. ಆದರೆ, ಪ್ರಧಾನಿ ಈ ವಿಷಯದ ಬಗ್ಗೆ ನೇರವಾಗಿ ಪ್ರಸ್ತಾಪಿಸಿಲ್ಲ.

ಭಾರತೀಯ ವಿದ್ಯಾರ್ಥಿಗಳು, ಅದರಲ್ಲೂ ವೈದ್ಯಕೀಯ ಶಿಕ್ಷಣದ ವಿದ್ಯಾರ್ಥಿಗಳು ವಿದೇಶಕ್ಕೆ ತೆರಳುತ್ತಿದ್ದಾರೆ. ಇದರಿಂದಾಗಿ ಕೋಟ್ಯಂತರ ರೂಪಾಯಿ ಭಾರತದಿಂದ ಹೊರ ಹೋಗುತ್ತಿದೆ ಎಂದು ಪ್ರಧಾನಿ ಹೇಳಿದ್ದಾರೆ.

ನಮ್ಮ ಮಕ್ಕಳು ಶಿಕ್ಷಣಕ್ಕಾಗಿ, ಅದರಲ್ಲೂ ವೈದ್ಯಕೀಯ ಶಿಕ್ಷಣಕ್ಕಾಗಿ ಸಣ್ಣ ದೇಶಗಳಿಗೆ ತೆರಳುತ್ತಿದ್ದಾರೆ. ಅಲ್ಲಿ ಭಾಷೆಯ ಸಮಸ್ಯೆ ಇದೆ. (2ನೇ ಪುಟಕ್ಕೆ)

## ನನ್ನ ಪಾಲಿಸಿ-ನನ್ನ ಕೈಯಲ್ಲಿ ಬೆಳೆ ವಿಮಾ ಅಭಿಯಾನ

ಬೆಂಗಳೂರು, ಫೆ. 26- ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ವ್ಯಾಪ್ತಿ ಹೆಚ್ಚಿಸುವ ಜೊತೆಗೆ ಯೋಜನೆಯನ್ನು ರೈತರ ಮನೆ ಬಾಗಿಲಿಗೆ ತಲುಪಿಸುವ "ನನ್ನ ಪಾಲಿಸಿ-ನನ್ನ ಕೈಯಲ್ಲಿ'' ಎಂಬ ಬೆಳೆ ವಿಮೆ ವಿತರಣಾ ಅಭಿಯಾನ ಪ್ರಾರಂಭಿಸಲಾಗುವುದು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಜಿಕೆವಿಕೆ ಆಡಿಟೋರಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಪ್ರಕೃತಿ ವಿಕೋಪಗಳಿಂದ ಬೆಳೆಗಳಿಗೆ ವಿಮಾ ಭದ್ರತಾ ಕವಚ ಒದಗಿಸುವುದು ಈ ಯೋಜನೆಯ ಸಂಕಲ್ಪವಾಗಿದೆ ಎಂದರು.

2021ರ ಮುಂಗಾರು ಹಂಗಾಮಿನಲ್ಲಿ 113.49 ಕೋಟಿ ರೂ. ಮೊತ್ತದ ಬೆಳೆ ವಿಮಾ ಪರಿಹಾರ ಸ್ಥಳೀಯ ಪ್ರಕೃತಿ ವಿಕೋಪಗಳಡಿ (2ನೇ ಪುಟಕ್ಕೆ)


ಪುಣ್ಯಸ್ಮರಣೆ



ನಿಧನ : 27-02-2017

ಡಾ. ಕೆ. ಸಿದ್ದಪ್ಪನವರು
ಚರ್ಮರೋಗ ತಜ್ಞರು
ಪ್ರೊಫೆಸರ್ (ನಿ.), ಚರ್ಮರೋಗ ವಿಭಾಗ, ಜೆ.ಜೆ.ಎಂ, ವೈದ್ಯಕೀಯ ಕಾಲೇಜು, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ....
ಪತ್ನಿ : ಶ್ರೀಮತಿ ಮಂಜುಳ ಸಿದ್ದಪ್ಪ ಮತ್ತು ಬಂಧುಗಳು


# ಜೆಡಿಎಸ್ ನಾಯಕ ಕುಮಾರಸ್ವಾಮಿ ಅನಿವಾರ್ಯತೆ ಬರಲಿದೆ

ದಾವಣಗೆರೆ, ಫೆ.26- ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಜೆಡಿಎಸ್ ಪಕ್ಷಕ್ಕೆ ಉತ್ತಮ ವಾತಾವರಣ ಸೃಷ್ಟಿಯಾಗಿ, ಪಕ್ಷದ ನಾಯಕ ಹೆಚ್.ಡಿ. ಕುಮಾರಸ್ವಾಮಿ ಅವರ ಅನಿವಾರ್ಯತೆ ಬರಲಿದೆ ಎಂದು ಮಾಜಿ ಶಾಸಕ, ಜೆಡಿಎಸ್ ಮುಖಂಡ ಹೆಚ್. ಎಸ್. ಶಿವಶಂಕರ್ ವಿಶ್ವಾಸ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶ ಜನತಾದಳದ (ಜಾತ್ಯತೀತ) ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ವತಿಯಿಂದ ನಗರದ ರೋಟರಿ ಬಾಲಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಕಾರ್ಯಕರ್ತರ ಸಭೆ, ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಸ್ತುತ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳೆರಡೂ ಅಧಿಕಾರ ಹಾಗೂ ಕುರ್ಚಿಗಾಗಿ ಪೈಪೋಟಿ ಮಾಡುತ್ತಿವೆ. ಜನಪರವಾದ ಕಾಳಜಿಯನ್ನೇ ತೋರುತ್ತಿಲ್ಲ, ಜನರ ಕಲ್ಯಾಣಕ್ಕಾಗಿ ಯೋಜನೆಗಳಿಲ್ಲ. ರಾಜ್ಯಕ್ಕೆ ನೂತನ ಮುಖ್ಯಮಂತ್ರಿ ಬಂದು ಆರು ತಿಂಗಳು ಕಳೆದರೂ ಯಾವ ಯೋಜನೆ ರಾಜ್ಯಕ್ಕೆ ನೀಡಿದ್ದಾರೆಂದು ದೀಪ ಹಚ್ಚಿ ಹುಡುಕಿದರೂ ಸಿಗುತ್ತಿಲ್ಲ. ಈ ಸರ್ಕಾರ ಇದೆಯೋ, ಇಲ್ಲವೋ ಎಂಬಂತಾಗಿದೆ ಎಂದು ಟೀಕಿಸಿದರು.

ರಾಜಕಾರಣವೆಂಬುದು ಕೇವಲ ಅಧಿಕಾರಕ್ಕಾಗಿ ಅಲ್ಲ, ಜನರ ಸೇವೆಗಾಗಿ. ಹಿಂದಿದ್ದ ಜನಪರವಾದ ಸೇವೆ ಎಂಬುದು ಪ್ರಸ್ತುತ ಅರ್ಥ ಕಳೆದುಕೊಂಡಿದೆ. ಸೇವೆ ಇಲ್ಲ ಸ್ವಾಹಾ ಇದೆ. ಸ್ವಾಹಕ್ಕಾಗಿ ರಾಜಕಾರಣದಲ್ಲಿ ಉಳಿಯಬೇಕೆಂಬ ಸ್ಥಿತಿ ಬಂದಿದೆ. ಮತದಾರ ತನ್ನ ತೀರ್ಮಾನವನ್ನು ಗಟ್ಟಿ, ಸಮರ್ಥವಾಗಿ, ಯೋಗ್ಯತೆಗೆ ಅನುಸಾರವಾಗಿ ತೆಗೆದುಕೊಳ್ಳದಿದ್ದರೆ ಪ್ರಜಾಪ್ರಭುತ್ವ ಅಧಃಪತನಕ್ಕೆ ಹೋಗಲಿದೆ. ಹಾಗಾಗಿ ಮತದಾರ ತನ್ನ ಮನಸ್ಸನ್ನು ಚಂಚಲತೆಗೆ ಬಿಡಬಾರದು ಎಂದು ಹೇಳಿದರು.

ಮತದಾರನ ಮನಸ್ಸು (4ನೇ ಪುಟಕ್ಕೆ)

### ಜೆಡಿಎಸ್-ಕುಮಾರಸ್ವಾಮಿ ಬಿಟ್ಟು ಹೋಗಲ್ಲ



ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ದೇಶದಲ್ಲಿ ಯಾರೂ ಮಾಡಲು ಸಾಧ್ಯವಿಲ್ಲದ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತಂದರು. ಮಹಾತ್ಮ ಗಾಂಧೀಜಿ ನಂತರ ಗ್ರಾಮ ವಾಸ್ತವ್ಯವನ್ನು ಮಾಡಿದ ಮಹಾಪುರುಷ ಕುಮಾರಸ್ವಾಮಿ. ರಾಜ್ಯದ ಅಭಿವೃದ್ಧಿಯ ಕನಸುಗಾರ ಕುಮಾರಸ್ವಾಮಿ ಅವರಿಗೆ ರಾಜ್ಯವನ್ನಭಿವೃದ್ಧಿಪಡಿಸಲು ಪುನಃ ಅವಕಾಶ ಸಿಗುತ್ತಿಲ್ಲ, ಜನ ಮನಸ್ಸು ಮಾಡುತ್ತಿಲ್ಲ. ಪರಿಸ್ಥಿತಿ ಕೈಗೂಡಿಸುತ್ತಿಲ್ಲ. ಸಾಕಷ್ಟು ಅವಕಾಶಗಳೇ ಬಂದರೂ ನಾನು ಜೆಡಿಎಸ್ ಪಕ್ಷವನ್ನಾಗಲೀ, ಕುಮಾರಸ್ವಾಮಿ ಅವರನ್ನಾಗಲೀ ಬಿಟ್ಟು ಹೋಗಲ್ಲ. ಪಕ್ಷದಲ್ಲೇ ಉಳಿಯುತ್ತೇನೆ. ಪಕ್ಷ ಕಟ್ಟಿ ಬೆಳೆಸುತ್ತೇನೆ. ಆತಂಕ ಬೇಡ. ನಾವೆಲ್ಲರೂ ಸೇರಿ ಪಕ್ಷ ಕಟ್ಟಿ ಬೆಳೆಸುತ್ತಾ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡೋಣವೆಂದು ಪಕ್ಷದ ಕಾರ್ಯಕರ್ತರಿಗೆ ಹೆಚ್.ಎಸ್. ಶಿವಶಂಕರ್ ಕರೆ ನೀಡಿದರು.


ಪ್ರಥಮ ವರ್ಷದ ಪುಣ್ಯಸ್ಮರಣೆ



ಲಿಂ|| ಶರಣ ಮಾಳಿಗೇರ ಎಂ. ನಾಗಬಸಪ್ಪನವರು
ಜನನ: 19.04.1954 ನಿಧನ : 08.03.2021

ನೀವು ನಮ್ಮನ್ನಗಲಿ ಒಂದು ವರ್ಷವಾಯಿತು,
ನಮ್ಮೆಲ್ಲರ ಮನಸ್ಸಿನಲ್ಲಿ ಸದಾ ನೆಲೆಸಿರುತ್ತೀರಿ.
ನೀವು ಹಾಕಿ ಕೊಟ್ಟ ಮಾರ್ಗದರ್ಶನ ನಮಗೆ ದಾರಿ ದೀಪವಾಗಿದೆ.
ಭಗವಂತ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ದಿನಾಂಕ : 27.02.2022ರ ಭಾನುವಾರ, ಮಧ್ಯಾಹ್ನ 12 ಗಂಟೆಗೆ
ಸ್ಥಳ: ಮೃತರ ಸ್ವಗೃಹ, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ

ಇಂತಿ ದುಃಖತಪ್ತ ಕುಟುಂಬ ವರ್ಗ
ಮಾಳಿಗೇರ ವಂಶಸ್ಥರು, ಎಲೆಬೇತೂರು ಗ್ರಾಮಸ್ಥರು
ಹಾಗೂ ಬಂಧು-ಮಿತ್ರರು.



ಚೆನ್ನೈ ಕುಮರನ್
ಇದೀಗ ಪ್ರದರ್ಶನ ಮತ್ತು
ಮಾರಾಟ
ದಾವಣಗೆರೆಯಲ್ಲಿ

1955
KUMARAN SILK
TRADERS
ಜಯ ನಗರ, ಬೆಂಗಳೂರು

VARAM
BOUTIQUE JEWELS
92.5 SILVER JEWELLERY



ವೇದಿಕೆ
ಸದರನ್ ಸ್ಟಾರ್ ಹೋಟೆಲ್, ದಾವಣಗೆರೆ.
3993/23 ಶಾಮನೂರು ರೋಡ್, ಎಸ್.ಎಸ್. ಲೇಔಟ್, "ಎ" ಬ್ಲಾಕ್
ಕುವೆಂಪು ನಗರ, ಲಕ್ಷ್ಮೀ ಫ್ಲೋರ್ ಮಿಲ್ ಹತ್ತಿರ, ಎಸ್.ಎಸ್. ಮಾಲ್
ದಾವಣಗೆರೆ. ಕರ್ನಾಟಕ-577 004.
ದಿನಾಂಕ :
25th, 26th, 27th ಫೆಬ್ರವರಿ 2022
ಬೆಳಿಗ್ಗೆ 10.00 ರಿಂದ ರಾತ್ರಿ : 9.00 ರವರೆಗೆ
ಅತಿ ಕಡಿಮೆ ಬೆಲೆಯಲ್ಲಿ
ಕಾಂಚೀಪುರಂ ರೇಷ್ಮೆ ಸೀರೆಗಳು
ಪ್ರತ್ಯೇಕ ರಿಯಾಯಿತಿ
5 ರಿಂದ 10%
ಹೊಸ ನಂ. 15, ಹಳೆಯ ನಂ. 653, 11ನೇ ಸಿ ಮೇನ್ ರೋಡ್, 5ನೇ ಬ್ಲಾಕ್, ಜಯನಗರ, ಬೆಂಗಳೂರು-560 041
ಫೋ. : 080-2663 1300, ಸೆಲ್ : 88677 92923

# ಜಾನಪದ - ಶರಣ ಸಾಹಿತ್ಯ ನಮಗೆ ಮಾರ್ಗದರ್ಶಿ

## 'ಕನ್ನಡ ಭಾರತಿ ರಂಗ ಪ್ರಶಸ್ತಿ' ಸ್ವೀಕರಿಸಿದ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ



ದೆಹಲಿ, ಫೆ.26- ಬಸವಾದಿ ಶರಣರು ನುಡಿ ಜಾಣರಾದಂತೆ ನಡೆ ಧೀರರೂ ಆಗಿದ್ದರು. ಅವರ ನಡೆ-ನುಡಿಯ ನಡುವೆ ಕೂದಲಿನಷ್ಟೂ ಅಂತರ ಇರಲಿಲ್ಲ. ಆದರೆ ಇಂದು ಕಾವಿ, ಖಾಕಿ, ಖಾದಿ ಧಾರಿಗಳಲ್ಲಿ ಈ ಅಂತರ ಹೆಚ್ಚುತ್ತಿದೆ. ಸಮಾಜಕ್ಕೆ ದಿಕ್ಕನ್ನು ತೋರಿಸುವವರೇ ದಿಕ್ಕು ತಪ್ಪುತ್ತಿಪ್ಪಿದ್ದಾರೆ. ಇಂಥ ಸಂದರ್ಭದಲ್ಲಿ ಜಾನಪದ ಮತ್ತು ಶರಣ ಸಾಹಿತ್ಯ ನಮಗೆ ಮಾರ್ಗದರ್ಶಿಯಾಗಬಲ್ಲವು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಕರ್ನಾಟಕ ಸಂಘದ ಅಮೃತ ಮಹೋತ್ಸವದ ನಿಮಿತ್ತ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಬಾರಿಯ 'ಕನ್ನಡ ಭಾರತಿ ರಂಗ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ ಅವರು ಮಠಾಧಿಪತಿಗಳಲ್ಲೇ ವಿಶಿಷ್ಟ ವ್ಯಕ್ತಿತ್ವ ಹೊಂದಿದವರು. ಆ ಕಾಲಕ್ಕೆ ಅವರು ರಂಗಭೂಮಿಯನ್ನು ಸಮರ್ಥವಾಗಿ ಬಳಸಿಕೊಂಡವರು. ಅವರ ಮೂಲ ಆಶಯ ಬಸವಾದಿ ಶರಣರ ತತ್ವ, ಸಿದ್ಧಾಂತಗಳನ್ನು ವಿಶ್ವಕ್ಕೆ ಪರಿಚಯಿಸುವುದಾಗಿತ್ತು. ಅವರು ಹಾಕಿಕೊಟ್ಟ ದಾರಿಯಲ್ಲಿ ನಾವು ಮುಂದೆ ಸಾಗುತ್ತಿದ್ದೇವಷ್ಟೇ ಎಂದರು.

ರಂಗಭೂಮಿಯಲ್ಲಿ ಸಂಗೀತ, ಸಾಹಿತ್ಯ, ನೃತ್ಯಗಳು ಮೇಳೈಸಿರುವುದರಿಂದ ಅದು ಅಬಾಲವೃದ್ಧರಾದಿಯಾಗಿ ಎಲ್ಲರನ್ನೂ ತನ್ನತ್ತ ಸೆಳೆದುಕೊಳ್ಳುವುದು. ಇಂದು ದೃಶ್ಯ ಮಾಧ್ಯಮಗಳು ಮನೋವಿಕಾಸದ ಬದಲಾಗಿ ಮನೋವಿಲಾಸದ ಕಡೆ ಗಮನ ಹರಿಸುತ್ತಿರುವುದು ದುರದೃಷ್ಟಕರ ಸಂಗತಿ ಎಂದರು.

ಸ್ವಾಮಿತನಕ್ಕಿಂತ ದೊಡ್ಡ ಗೌರವ ಮತ್ತೊಂದಿಲ್ಲ. ನಾವು ಬೇಡ, ಬೇಡ ಎನ್ನುತ್ತಿರುವಂತೆಯೇ ನಮಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಬರುತ್ತಿವೆ. ಇಂಥ ಸಂದರ್ಭದಲ್ಲಿ ಸಂಘಟಕರ ಮನಸ್ಸಿಗೆ ನೋವಾಗಬಾರದು ಎನ್ನುವ ಕಾರಣಕ್ಕೆ ಬಹಳ ಮುಜುಗರದಿಂದಲೇ ಸ್ವೀಕರಿಸುತ್ತಿದ್ದೇವೆ. ಈ ಪ್ರಶಸ್ತಿ ನಮ್ಮ ಕಲಾವಿದರಿಗೆ, ಸಂಘಟಕರಿಗೆ ಮತ್ತು ಪ್ರೇಕ್ಷಕರಿಗೆ ಸಲ್ಲುತ್ತದೆ ಎಂದು ನುಡಿದರು.

ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪುರಸ್ಕಾರ ಪಡೆದ ಡಾ. ಪುರುಷೋತ್ತಮ ಬಿಳಿಮಲೆ ಮಾತನಾಡಿ, ಸರೋಜಿನಿ ಮಹಿಷಿ ದೆಹಲಿಯಲ್ಲಿ ಕರ್ನಾಟಕ ಸಂಘವನ್ನು ಕಟ್ಟುವಲ್ಲಿ ಬಹಳ ಪರಿಶ್ರಮಪಟ್ಟವರು, ಇದರ ಅಧ್ಯಕ್ಷರೂ ಆಗಿದ್ದರು. ದೊಡ್ಡ ಹೋರಾಟಗಾರ್ತಿ, ಸಾಹಿತಿ, ಅನುವಾದಕಿ, ಅಪರೂಪದ ರಾಜಕಾರಣಿ. ಕನ್ನಡಿಗರು ಮರೆಯದ ಹೆಸರು. ಭ್ರಷ್ಟಾಚಾರವನ್ನು ಬದುಕಿನುದ್ದಕ್ಕೂ ದೂರ ಇಟ್ಟವರು. ಇಂಥವರ ಹೆಸರಿನ ಪ್ರಶಸ್ತಿ ಪಡೆದಿರುವುದು ನನಗೆ ಸಂತೋಷ ತಂದಿದೆ ಎಂದರು.

ಪ್ರಶಸ್ತಿ ಆಯ್ಕೆ ಸಮಿತಿಯ ಸಂಚಾಲಕ ಶ್ರೀನಿವಾಸ್ ಜಿ.ಕಪ್ಪಣ್ಣ ಮಾತನಾಡಿ, ದೆಹಲಿ ಕರ್ನಾಟಕ ಸಂಘ ದೇಶಕ್ಕೆ ಕನ್ನಡ ಸಂಸ್ಕೃತಿಯನ್ನು ಹಂಚುವ ವೇದಿಕೆಯಾಗಿದೆ ಎಂದರು.

ದೆಹಲಿ ಜೆ.ಎಸ್.ಎಸ್ ಮಹಾಸಂಸ್ಥಾನ ಶಾಖಾ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ನವದೆಹಲಿಯ ಜೆ .ಎನ್.ಯು ಕನ್ನಡ ಅಧ್ಯಯನ ಪೀಠದ ಅಧ್ಯಕ್ಷ ಡಾ. ವಿಶ್ವನಾಥ್, ಯುವ ನಟ ಅನುಪ್ ರೇವಣ್ಣ ಮಾತನಾಡಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ. ಎಂ. ನಾಗರಾಜ ಅಧ್ಯಕ್ಷತೆ ವಹಿಸಿದ್ದರು.

ಜಾನಪದ ಜೀವಧ್ವನಿ ತಂಡ ಕನ್ನಡಗೀತೆ, ವಚನಗೀತೆ, ರೈತಗೀತೆಗಳನ್ನು ಸೊಗಸಾಗಿ ಹಾಡಿದರು. ದೆಹಲಿ ಕನ್ನಡಿಗ ಮಹಿಳೆಯರು ನಾಡಗೀತೆ ಹಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಸ್ವಾಗತಿಸಿದರು.

## ರಾಜ್ಯಮಟ್ಟದ ಭಜನಾ ಸ್ಪರ್ಧೆ

**ರಾಣೇಬೆನ್ನೂರು**

ರಾಣೇಬೆನ್ನೂರು, ಫೆ.26- ನಗರದ ಕುರುಹಿನಶೆಟ್ಟಿ ಸಮಾಜ ಸೇವಾ ಸಂಘ, ಕಾಕಿ ಜನ ಸೇವಾ ಸಂಸ್ಥೆ, ಜೇಸಿ ಸಂಸ್ಥೆ, ಜೇಸಿಸ್ ಕ್ಷೇಮಾಭಿವೃದ್ಧಿ ಕ್ರೆಡಿಟ್ ಕೋ ಆಫ್ ಸೊಸೈಟಿ ಇವರುಗಳ ಸಂಯುಕ್ತಾಶ್ರಯದಲ್ಲಿ ಮಹಾ ಶಿವರಾತ್ರಿ ಜಾಗರಣೆ ಪ್ರಯುಕ್ತ ಮಾರ್ಚ್ 1ರಂದು ರಾತ್ರಿ 9ಕ್ಕೆ ನಗರದ ತಾಲ್ಲೂಕು ಆಡಳಿತ ಸೌಧದ ಬಳಿಯ ಶ್ರೀ ನೀಲಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ರಾಜ್ಯ ಮಟ್ಟದ ಭಜನಾ ಸ್ಪರ್ಧೆ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ತಂಡಗಳು ಇದೇ ದಿನಾಂಕ 28ರ ಒಳಗಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. ವಿವರಕ್ಕೆ ಸಂಪರ್ಕಿಸಿ : 9449973158, 9242881170, 9844997082.

## ಹೊನ್ನಾಳಿಗೆ ನಾಳೆ ಭೈರತಿ ಬಸವರಾಜ್

ದಾವಣಗೆರೆ, ಫೆ.26- ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ನಾಡಿದ್ದು ದಿನಾಂಕ 28 ರ ಸೋಮವಾರ ಜಿಲ್ಲೆಯಲ್ಲಿ ಪ್ರವಾಸ ಹಮ್ಮಿಕೊಂಡಿದ್ದಾರೆ. ಬೆಳಿಗ್ಗೆ 11ಕ್ಕೆ ಹೊನ್ನಾಳಿ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ನಂತರ ಹೊನ್ನಾಳಿ ನೂತನ ಕಂದಾಯ ಉಪ ವಿಭಾಗದ ಉಪ ವಿಭಾಗಾಧಿಕಾರಿ ಕಛೇರಿ ಉದ್ಘಾಟನಾ ಸಮಾರಂಭ ಹಾಗೂ ಸಂಜೀವಿನಿ ಯೋಜನೆ ಅಡಿಯಲ್ಲಿ ಸ್ತ್ರೀಶಕ್ತಿ ಸಂಘಗಳಿಗೆ ಚೆಕ್ ವಿತರಣೆ ಹಾಗೂ ಸಾಮಾಜಿಕ ಭದ್ರತಾ ಯೋಜನೆಯಡಿ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 2ಕ್ಕೆ ಹೊನ್ನಾಳಿ-ಶಿವಮೊಗ್ಗ ಮುಖ್ಯರಸ್ತೆಯಲ್ಲಿ ಕುಂಚಿಟಿಗ ಸಮುದಾಯ ಭವನದ ಭೂಮಿ ಪೂಜಾ ಸಮಾರಂಭ ಹಾಗೂ ಇತರೆ ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.

## ಶ್ರೀ ಗೌರಿಶಂಕರ ದೇವಸ್ಥಾನದ ಮೇಲ್ಛಾವಣಿ ನಿರ್ಮಾಣ ಕಾಮಗಾರಿಗೆ ಶಾಸಕರಿಂದ ಪೂಜೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಫೆ.26- ದೇವಸ್ಥಾನಗಳು ಶ್ರದ್ಧೆ, ಭಕ್ತಿಯ ಪ್ರತೀಕವಾಗಿ ಜನರ ನೆಮ್ಮದಿಯ ಕೇಂದ್ರ ಸ್ಥಾನಗಳಾಗಿವೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ನಗರದ ಶ್ರೀ ಗೌರಿಶಂಕರ ದೇವಸ್ಥಾನದಲ್ಲಿ ಶುಕ್ರವಾರ ಆವರಣದ ಮೇಲ್ಛಾವಣೆ ನಿರ್ಮಾಣ ಕಾಮಗಾರಿಯ ಪೂಜೆ ನೆರವೇರಿಸಿ ಅವರು ಮಾತನಾಡಿದರು, ಎಲ್ಲ ಕಡೆಯೂ ದೇವರಿದ್ದಾನೆ. ಆದರೆ, ಅದರ ಅನುಭವ ಪಡೆಯುವ ಕಾರ್ಯ ನಮ್ಮಿಂದಾಗಬೇಕು. ಇಂತಹ ಭಕ್ತಿ ಸ್ವರೂಪದ ದೇವಾಲಯಗಳನ್ನು ರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ದಾನಿಗಳು ಹಾಗೂ ಸ್ಥಳೀಯರ ಸಹಕಾರದಿಂದ ದೇವಸ್ಥಾನ ಅಭಿವೃದ್ಧಿ ಹೊಂದಿರುವುದು ಶ್ಲಾಘನೀಯ ಎಂದರು.

ನಗರಸಭೆ ಸದಸ್ಯ ಹನುಮಂತಪ್ಪ ಹೆದ್ದೇರಿ, ಸಂಕಪ್ಪ ಮಾರನಾಳ, ದೇವಸ್ಥಾನ ಸಮಿತಿ ಅಧ್ಯಕ್ಷ ಜಿ.ಕೆ.ಗೌಡರ, ಉಪಾಧ್ಯಕ್ಷ ಓ.ಎಫ್.ದ್ಯಾವನಗೌಡರ, ಕಾರ್ಯದರ್ಶಿ ಅಶೋಕ ದುರ್ಗದಶೀಮಿ, ಆರ್.ಕೆ.ಕುಡಪಲಿ, ಡಿ.ಬಿ.ಬೇಲೂರ. ಎಸ್.ಎಸ್.ಹೂಲಿ, ವ್ಹಿ.ಎನ್.ಶಾಂತನವರ, ಕೆ.ಬಿ. ಪುಟ್ಟಪ್ಪನವರ, ಆರ್.ಬಿ.ಹರಳಹಳ್ಳಿ, ಪಿ.ಹೆಚ್. ಬಣಕಾರ, ಸಿ.ವ್ಹಿ.ಪಾಟೀಲ, ಪ್ರಮೀಳಾ ನಾಡಿಗೇರ, ಕಮಲಮ್ಮ ಬೆಳವಿಗಿ, ಕೆ.ಎಸ್.ಅಂಗಡಿ, ರುದ್ರಗೌಡ ಪಾಟೀಲ, ಅರ್ಚಕ ಶರಣಬಸಯ್ಯ ಹಿರೇಮಠ, ರಾಜು ಭಾಸ್ಕರ ಮತ್ತಿತರರು ಇದ್ದರು.

# ಅಭಿವೃದ್ಧಿಯಲ್ಲಿ ವಿಫಲವಾಗಿ ಮತ ಕೇಳಲು ಧೈರ್ಯವಿಲ್ಲದೆ ಆರೋಪ

## ಸಂಸದ ಸಿದ್ದೇಶ್ವರ ವಿರುದ್ಧದ ಶಾಸಕ ರಾಮಪ್ಪ ಹೇಳಿಕೆಗೆ ವೀರೇಶ್ ಹನಗವಾಡಿ ತಿರುಗೇಟು

> "ಶಾಸಕ ಎಸ್. ರಾಮಪ್ಪ ಕೈಯಲ್ಲಿ ಆಗದವರು ಮೈಯಲ್ಲ ಪರಚಿಕೊಂಡವರ ತರಹ ಹೇಳಿಕೆಯನ್ನು ಕೊಡುವುದು ಬಿಟ್ಟು, ಹರಿಹರ ಕ್ಷೇತ್ರಕ್ಕೆ ತಮ್ಮ ಕೊಡುಗೆ ಏನು ಎಂದು ಅರಿಯಬೇಕು. ಅಭಿವೃದ್ಧಿ ಮಾಡದೇ ಮತದಾರರ ಬಳಿ ಮತ ಕೇಳಲು ಧೈರ್ಯವಿಲ್ಲದೆ ಸಂಸದರ ಮೇಲೆ ಆರೋಪ ಮಾಡುವುದು ಶೋಭೆ ತರುವುದಿಲ್ಲ.
>
> - ಎಸ್.ಎಂ. ವೀರೇಶ್ ಹನಗವಾಡಿ, ಜಿಲ್ಲಾ ಬಿಜೆಪಿ ಅಧ್ಯಕ್ಷ

ಹರಿಹರ, ಫೆ. 26 - ಶಾಸಕ ಎಸ್. ರಾಮಪ್ಪ ತಮ್ಮ ನಾಲ್ಕು ವರ್ಷಗಳ ಆಡಳಿತದಲ್ಲಿ ಜನ ಪರವಾದ ಅಭಿವೃದ್ಧಿ ಕೆಲಸ ಮಾಡದೆ ವಿಫಲರಾಗಿದ್ದಾರೆ. ಕ್ಷೇತ್ರದ ಮತದಾರರಿಂದ ಮತ ಕೇಳಲು ಧೈರ್ಯವಿಲ್ಲದೇ, ಹರಿಹರ ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿರುವ ಸಂಸದ ಜಿ.ಎಂ. ಸಿದ್ದೇಶ್ವರ ಮೇಲೆ ಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಹೇಳಿದ್ದಾರೆ.

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡುತ್ತಿದ್ದರು.

ರಾಮಪ್ಪನವರು ಹಿಂದೆ ಕುಮಾರಸ್ವಾಮಿ ಆಡಳಿತದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಒಂದು ರೂಪಾಯಿ ಬಿಡುಗಡೆ ಮಾಡಿಸಲು ಆಗಿರಲಿಲ್ಲ. ನಂತರ ಬಿ.ಎಸ್. ಯಡಿಯೂರಪ್ಪನವರ ಆಡಳಿತದಲ್ಲಿ ಸಿದ್ದೇಶ್ವರ ಅವರು ಎಕ್ಕೆಗೊಂದಿ - ನಂದಿಗುಡಿ ರಸ್ತೆಗೆ 13.50 ಕೋಟಿ ರೂ. ಮತ್ತು ಗಂಗನರಸಿ - ಚಿಕ್ಕಬಿದರಿ ರಸ್ತೆ ಕಾಮಗಾರಿಗೆ 15 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಿಸಿದರು ಎಂದರು.

ತಾಲ್ಲೂಕಿಗೆ ಸಾಕಷ್ಟು ಅನುದಾನ ಬಿಡುಗಡೆ ಮಾಡಿಸಿ ಅಭಿವೃದ್ಧಿ ಮಾಡಿದ್ದಾರೆ.

ಹನಗವಾಡಿ ಬಳಿ 47 ಎಕರೆ ಪ್ರದೇಶದಲ್ಲಿ 940 ಕೋಟಿ 2.ಜಿ ಎಥೆನಾಲ್ ಕಾರ್ಖಾನೆ ಕೇಂದ್ರ ಸರ್ಕಾರದ ಅನುಮೋದನೆ ಪಡೆದಿದೆ. ಆದರೆ ತಾಂತ್ರಿಕ ಬದಲಾವಣೆ ಮಾಡಿ ಕಡಿಮೆ ವೆಚ್ಚದಲ್ಲಿ ಅಧುನಿಕ ತಂತ್ರಜ್ಞಾನ ಬಳಸಿ ಮಾಡುವುದಕ್ಕೆ ಸಿದ್ಧತೆ ನಡೆದಿದೆ.

ಜೊತೆಗೆ ಸಾರಥಿ, ಕುರಬರಹಳ್ಳಿ ಬಳಿ 300 ಎಕರೆ ಪ್ರದೇಶದಲ್ಲಿ ಯೂರಿಯಾ ಕಾರ್ಖಾನೆ ಸ್ಥಾಪನೆಗೆ ದುಬೈನ ವ್ಯಾಪಾರಿ ಮುಂದೆ ಬಂದಿದ್ದು ಅದು ಕೂಡ ಪ್ರಗತಿ ಹಂತದಲ್ಲಿ ಇದೆ. ಕೊರೊನಾದಿಂದ ಈ ಯೋಜನೆಗಳು ವಿಳಂಬವಾಗಿವೆ ಎಂದವರು ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಳಿ ಜಿಲ್ಲೆಯ ಅಭಿವೃದ್ಧಿಗೆ 78 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದ್ದು ಅದರಲ್ಲಿ ಹರಿಹರ ತಾಲ್ಲೂಕಿನ ಅಭಿವೃದ್ಧಿಗೆ 30 ಕೋಟಿ ಅನುದಾನ ಬಿಡುಗಡೆ ಮಾಡಿರುವುದು ಜಿಲ್ಲೆಯ ಎಲ್ಲಾ ತಾಲ್ಲೂಕು ಜನತೆಗಿಂತ ಸಂಸದರಿಗೆ ಹರಿಹರ ತಾಲ್ಲೂಕಿನ ಜನತೆಯ ಮೇಲೆ ಇರುವ ಅತಿಯಾದ ಪ್ರೀತಿಯಿಂದ ಎಂದು ವೀರೇಶ್ ತಿಳಿಸಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಚುನಾವಣೆ ಹತ್ತಿರ ಬರುತ್ತಿದ್ದಂತೆ, ಮತದಾರರ ಬಳಿ ಮತವನ್ನು ಕೇಳುವುದಕ್ಕೆ ಮುಜುಗರ ಆಗುತ್ತಿದ್ದು, ಮತ್ತು ಸಂಸದರು ತಾಲ್ಲೂಕಿನ ಅಭಿವೃದ್ಧಿಗೆ 30 ಕೋಟಿ ಅನುದಾನ ತಂದು ಅದು ಟೆಂಡರ್ ಕೂಡ ಆಗಿದ್ದರಿಂದ ನೊಂದುಕೊಂಡು ಹೇಳಿಕೆ ನೀಡುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ಭೈರನಪಾದ ಯೋಜನೆ ಬಗ್ಗೆ ನೀರು ಎಲ್ಲಿಗೆ ಹರಿದು ಹೋಗುತ್ತದೆ. ಅದರ ಯೋಜನೆ ಎಷ್ಟು ಪ್ರಮಾಣದಲ್ಲಿ ಇದೆ, ಏನು ಮಾಡಿದ್ದಾರೆ ಎಂದು ಗೊತ್ತಿಲ್ಲ. ಇದಕ್ಕೆ ಕಾರಣ ಭೈರನಪಾದ ಯೋಜನೆ ತುಂಗಭದ್ರಾ ನದಿಯಿಂದ ಕೊಪ್ಪ ಬಳಿ ನೀರು ತಂದರೆ ಅದರಿಂದ ದೇವರಬೆಳಕೆರೆಗೆ ನೀರು ಹರಿದು ಬಂದು ಇದರಿಂದ ಹಳ್ಳಗಳು ತುಂಬಿಕೊಂಡರೆ ಕೊನೆ ಭಾಗದ ಜಮೀನಿನ ರೈತರ ಹೊಲಗಳಿಗೆ ನೀರು ಬರುತ್ತದೆ.

ಆದರೆ, ಇದನ್ನು ಹಿಂದೆ ನೀರಾವರಿ ಸಚಿವರಾಗಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮೊಟಕುಗೊಳಿಸಿದ್ದಾರೆ ಎಂದವರು ಆರೋಪಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ಎ.ಬಿ. ವಿಜಯಕುಮಾರ್, ಹನುಮಂತಪ್ಪ, ನಾಮನಿರ್ದೇಶನ ಸದಸ್ಯ ರಾಘವೇಂದ್ರ, ದೂಡಾ ಸದಸ್ಯ ಬಾತಿ ಚಂದ್ರಶೇಖರ್, ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ, ರೂಪಾ ಕಾಟ್ವೆ, ಮಾಜಿ ನಗರಸಭೆ ಉಪಾಧ್ಯಕ್ಷೆ ಅಂಬುಜಾ ಪಿ. ರಾಜೊಳ್ಳಿ, ಮಂಜುನಾಯ್ಕ್, ತುಳಜಪ್ಪ ಭೂತೆ, ಪ್ರಶಾಂತ್, ವೀರೇಶ್, ಪ್ರವೀಣ್ ಪವರ್, ಅಶೋಕ ಕುಂಬಳೂರು, ಇತರರು ಹಾಜರಿದ್ದರು.

## ಕುರುವತ್ತಿ ಬಸವೇಶ್ವರ ಸಮಿತಿಯಿಂದ ಪಾದಯಾತ್ರೆ ರದ್ದು

ದಾವಣಗೆರೆ, ಫೆ.26- ಶ್ರೀ ಕುರುವತ್ತಿ ಬಸವೇಶ್ವರ ಸ್ವಾಮಿ ರಥೋತ್ಸವದ ಅಂಗವಾಗಿ ನಡೆಸಲುದ್ದೇಶಿಸಿದ್ದ ಪಾದಯಾತ್ರೆಯನ್ನು ರದ್ದುಪಡಿಸಿರುವುದಾಗಿ ಶ್ರೀ ಕುರುವತ್ತಿ ಬಸವೇಶ್ವರ ಸ್ವಾಮಿ ಪಾದಯಾತ್ರೆ ಸೇವಾ ಸಮಿತಿ ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಕಾನೂನು ಸಲಹೆಗಾರ ಕೆ.ಬಸವರಾಜ್, ಕೊರೊನಾ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಪಾದಯಾತ್ರೆ ಆಯೋಜಿಸಲು ಅನುಮತಿ ನೀಡದ ಕಾರಣ ರದ್ದುಗೊಳಿಸಿದ್ದೇವೆ ಎಂದರು.

ಕಳೆದ 18 ವರ್ಷಗಳಿಂದ ಸಮಿತಿಯಿಂದ ಪಾದಯಾತ್ರೆ ಆಯೋಜಿಸಲಾಗುತ್ತಿತ್ತು. ಮಾರ್ಚ್ 2ರ ಬುಧವಾರ ರಥೋತ್ಸವವಿದೆ ಎಂದವರು ಹೇಳಿದರು.

# ಶ್ರೀಮತಿ ಮುದೇಗೌಡ್ರು ಸುಶೀಲಮ್ಮನವರು ನಿಧನ



ದಿವಂಗತ ಮುದೇಗೌಡ್ರ ಬಸವರಾಜಪ್ಪ ನವರ ಧರ್ಮಪತ್ನಿ

**ಶ್ರೀಮತಿ ಸುಶೀಲಮ್ಮನವರು**

ದಿನಾಂಕ : 26.02.2022ರ ಶನಿವಾರ ಬೆಳಿಗ್ಗೆ 8.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುತ್ತಾರೆ.

ದಿನಾಂಕ : 27.02.2022ರ ಭಾನುವಾರ ಬೆಳಿಗ್ಗೆ 10.00 ರಿಂದ 12.00ರವರೆಗೆ

ಶ್ರೀಮತಿ ಪ್ರೇಮ ಮತ್ತು ಡಾ|| ಪಿ. ನಾಗರಾಜ್ ಅವರ ಸ್ವಗೃಹವಾದ ನಂ. 4094/1, ಶ್ರೀಮತಿ ರತ್ನಮ್ಮ ತೆಲಗಿ ಸಿದ್ದೇಶಪ್ಪ ಲೇಔಟ್, ನ್ಯೂ ಔಟರ್ ರಿಂಗ್ ರೋಡ್, ಬಸವೇಶ್ವರ ನಗರ, ದಾವಣಗೆರೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.

ನಂತರ ಬೂದಾಳ್ ರಸ್ತೆಯಲ್ಲಿರುವ ದೇವರಹಟ್ಟಿ ಗ್ರಾಮದ ಮುದೇಗೌಡರ ಶಾಂತಿ ವನದಲ್ಲಿ ಮಧ್ಯಾಹ್ನ 1.00 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ**

ಮೊ. : 76248 86992, 82771 67890, 94480 79478

# ವೈದ್ಯಕೀಯ ಶಿಕ್ಷಣದಲ್ಲಿ ಹೂಡಿಕೆಗೆ ಪ್ರಧಾನಿ ಕರೆ

**(1ನೇ ಪುಟದಿಂದ)** ಆದರೂ ಅವರು ಅಲ್ಲಿಗೆ ತೆರಳುತ್ತಿದ್ದಾರೆ.

ನಮ್ಮ ಖಾಸಗಿ ವಲಯ ದೊಡ್ಡ ಪ್ರಮಾಣದಲ್ಲಿ ಈ ವಲಯ ಪ್ರವೇಶಿಸಬಾರದೇಕೆ? ನಮ್ಮ ರಾಜ್ಯ ಸರ್ಕಾರಗಳು ಖಾಸಗಿ ವಲಯ ಈ ದಿಸೆಯಲ್ಲಿ ಜಮೀನು ಪಡೆಯಲು ನೀತಿಗಳನ್ನು ರೂಪಿಸಬಾರದೇಕೆ? ಎಂದವರು ಪ್ರಶ್ನಿಸಿದ್ದಾರೆ.

ಕಳೆದ ಕೆಲ ದಶಕಗಳಲ್ಲಿ ತಮ್ಮ ಸೇವೆಯಿಂದ ಭಾರತದ ವೈದ್ಯರು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ ಎಂದೂ ಪ್ರಧಾನಿ ಹೇಳಿದ್ದಾರೆ.

ಆರೋಗ್ಯ ವ್ಯವಸ್ಥೆಯ ಮೂಲಕ ಸಮಗ್ರ ಸೇವೆ ಒದಗಿಸುವ ಹಾಗೂ ಕ್ಷೇಮ ಸೇವೆಗಳನ್ನು ಒದಗಿಸಲು ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆಯೂ ಪ್ರಧಾನಿ ಮಾತನಾಡಿದ್ದಾರೆ.

ದುರ್ಗಮ ಪ್ರದೇಶಗಳಲ್ಲಿರುವ ಜನರಿಗೂ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಬೇಕು ಎಂಬ ದಿಸೆಯಲ್ಲಿ, ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ. ಗುಣಮಟ್ಟದ ಮೂಲಭೂತ ಆರೋಗ್ಯ ಸೇವೆ ಕೇವಲ ಮಹಾನಗರಗಳಿಗೆ ಸೀಮಿತವಾಗಬಾರದು ಎಂದು ಮೋದಿ ಹೇಳಿದ್ದಾರೆ.

## ರಸ್ತೆ ಅಪಘಾತದಲ್ಲಿ ಮಹಿಳೆಯ ಸಾವು

ಹರಿಹರ, ಫೆ. 26 - ಪ್ಯಾಸೆಂಜರ್ ಆಟೋ ಮತ್ತು ಟ್ರ್ಯಾಕ್ಟರ್ ನಡುವೆ ಆದ ಅಪಘಾತದಲ್ಲಿ ಓರ್ವ ಮಹಿಳೆ ಸ್ಥಳದಲ್ಲೇ ಮೃತ ಪಟ್ಟಿದ್ದು, 9 ಜನರು ಗಾಯಗೊಂಡ ಘಟನೆ ಶನಿವಾರ ಮಧ್ಯಾಹ್ನ ಹರಿಹರ - ಶಿವಮೊಗ್ಗ ರಸ್ತೆಯಲ್ಲಿ ಸಂಭವಿಸಿದೆ.

ಹರಿಹರದಿಂದ ಪ್ರಮಾಣಿಕರನ್ನು ತುಂಬಿಕೊಂಡ ಆಟೋ ಮಧ್ಯಾಹ್ನ ಹರಿಹರದಿಂದ ಬೆಳ್ಳೂಡಿ ಕಡೆ ಪ್ರಯಾಣಿಸುತ್ತಿದ್ದಾಗ ಮಲೇಬೆನ್ನೂರಿನಿಂದ ಹರಿಹರ ಕಡೆ ಬರುತ್ತಿದ್ದ ಟ್ರ್ಯಾಕ್ಟರ್ ಶಿವಮೊಗ್ಗ ರಸ್ತೆಯ ಪಂಚಮಸಾಲಿ ಮಠದ ಸಮೀಪ ಡಿಕ್ಕಿ ಹೊಡೆದು ಅಪಘಾತ ನಡೆದಿದೆ.

ಅಪಘಾತ ಸ್ಥಳದಲ್ಲಿಯೇ ಮೃತಪಟ್ಟ ಮಹಿಳೆಯನ್ನು ಚಂದ್ರಮ್ಮ (65) ಗಂಡ ಹನುಮಂತಪ್ಪ ನಾಗೇನಹಳ್ಳಿ ಎಂದು ಗುರುತಿಸಲಾಗಿದೆ. ಘಟನೆಯಲ್ಲಿ ಗಾಯಗೊಂಡವರನ್ನು ಹರಿಹರ ಸಾರ್ವಜನಿಕ ಆಸ್ಪತ್ರೆ ಹಾಗೂ ದಾವಣಗೆರೆಯ ಚಿಗಟೇರಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಸ್ಥಳಕ್ಕೆ ಸಿಪಿಐ ಸತೀಶ್ ಕುಮಾರ್, ಗ್ರಾಮಾಂತರ ಪಿಎಸ್ಐ ವೀರಬಸಪ್ಪ ಕುಸಲಾಪುರ ಹಾಗೂ ಸಿಬ್ಬಂದಿ ಭೇಟಿ ನೀಡಿದ್ದರು, ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾಂಗ್ರೆಸ್ ಸಂವಿಧಾನ ವಿರೋಧಿ ನೀತಿ

**ಶಾಸಕ ಅರುಣ ಕುಮಾರ ಖಂಡನೆ**



ರಾಣೇಬೆನ್ನೂರು, ಫೆ.26- ರಾಜ್ಯದ ಅಭಿವೃದ್ಧಿ ಹಾಗೂ ಜನರ ಹಿತಚಿಂತನೆ ಮಾಡದೆ ವಿನಾಕಾರಣ 5 ದಿನಗಳ ಕಾಲ ಧರಣಿ ನಡೆಸಿ ಅಧಿವೇಶನವನ್ನು ಹಾಳು ಮಾಡಿದ ಕಾಂಗ್ರೆಸ್‌ನ ಸಂವಿಧಾನ ವಿರೋಧಿ ನೀತಿಯನ್ನು ಶಾಸಕ ಅರುಣ ಕುಮಾರ್ ಪೂಜಾರ್ ಬಲವಾಗಿ ಖಂಡಿಸಿದರು.

ಅವರು ಬಿಜೆಪಿ ಕಛೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡುತ್ತಿದ್ದರು.

ಕಾಂಗ್ರೆಸ್‌ನವರ ದುರ್ವರ್ತನೆ ಜನಪರ ಕಾರ್ಯಗಳಿಗೆ ಆತಂಕ ಉಂಟುಮಾಡಿದೆ. ಜನ ವಿರೋಧಿ ನೀತಿಯೇ ಕಾಂಗ್ರೆಸ್‌ನವರ ಪ್ರಣಾಳಿಕೆ ಎಂದ ಶಾಸಕರು, ಈಶ್ವರಪ್ಪ ಅವರ ಮಾತುಗಳಲ್ಲಿ ತಪ್ಪು ಇರಲಿಲ್ಲ. ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮುಚ್ಚಿಕೊಳ್ಳಲು ಧರಣಿ ಪ್ರಾರಂಭಿಸಿದರು ಎಂದು ಶಾಸಕರು ಹೇಳಿದರು.

ಇದಕ್ಕೂ ಮೊದಲು ಅಂಧರ ಶಾಲಾ ಮಕ್ಕಳ ವಾಲಿಬಾಲ್ ಪಂದ್ಯಾಟ ಉದ್ಘಾಟನೆ, ನಂತರ ಮಾಕನೂರ ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಚಾಲನೆ, ಅಂಗನವಾಡಿ ಕಟ್ಟಡ ಉದ್ಘಾಟನೆ, ಭಾಗ್ಯಲಕ್ಷ್ಮಿ ಬಾಂಡ್ ವಿತರಣೆ ಮಾಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಶಾಸಕರ ಜೊತೆ ಚೋಳಪ್ಪ ಕಸವಾಳ, ಕೆ. ಶಿವಲಿಂಗಪ್ಪ, ಮಂಜುನಾಥ್ ಓಲೇಕಾರ, ಸಂತೋಷ್ ಪಾಟೀಲ, ಬಸವರಾಜ್ ಕೇಲಗಾರ, ರೂಪಾ ಚಿನ್ನಿಕಟ್ಟಿ ಮತ್ತಿತರರಿದ್ದರು.

## ರಾಷ್ಟ್ರಪತಿ ಬೆಂಗಾವಲು ವಾಹನ ಉರುಳಿ ಓರ್ವನ ಸಾವು

ಗೋಲಾಘಾಟ್ (ಅಸ್ಸಾಂ), ಫೆ. 26 - ಅಸ್ಸಾಂನ ಗೋಲಾಘಾಟ್ ಜಿಲ್ಲೆಯ ಬೊಕಾ ಖಾಟ್ ಎಂಬಲ್ಲಿ ರಾಷ್ಟ್ರಪತಿ ಬೆಂಗಾವಲು ವಾಹ ನಗಳು ತೆರಳುವಾಗ ಸರ್ಕಾರಿ ವಾಹನ ಉರುಳಿ ಓರ್ವ ವ್ಯಕ್ತಿ ಸಾವನ್ನಪ್ಪಿದ ಘಟನೆ ನಡೆದಿದೆ. ಬೊಕಾಖಾಟ್‌ನ ಮಿಲನ್‌ಪುರದ ರಾಮೇಶ್ವರ ರಬಿದಾಸ್ ಅವರು ಹೆದ್ದಾರಿಯಲ್ಲಿ ಬೆಂಗಾವಲು ವಾಹನ ಸಾಗಿದ ನಂತರ ರಸ್ತೆ ದಾಟಲು ಕಾಯುತ್ತಿದ್ದರು. ಆಗ ವಾಹನವೊಂದು ಉರುಳಿದೆ. ತಕ್ಷಣವೇ ಅವರನ್ನು ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಜೀವ ಉಳಿಯಲಿಲ್ಲ. ಬೆಂಗಾವಲು ವಾಹನ ಉರುಳಿ ಸಾವು ಸಂಭವಿಸಿದ ಬಗ್ಗೆ ಮಾಹಿತಿ ನೀಡಿರುವ ಅಸ್ಸಾಂ ಕೃಷಿ ಸಚಿವ ಅತುಲ್ ಬೋರ, ದುಃಖದ ಈ ಸಮಯದಲ್ಲಿ ಮೃತ ವ್ಯಕ್ತಿಯ ಕುಟುಂಬಕ್ಕೆ ಅಧಿಕಾರಿಗಳು ನೆರವು ನೀಡಲಿದ್ದಾರೆ ಎಂದು ಹೇಳಿದ್ದಾರೆ.

# ವಾಸನ ಗ್ರಾಮದ ಯು. ವೀರನಗೌಡ ನಿಧನ



ಹರಿಹರ ತಾಲ್ಲೂಕು ವಾಸನ ಗ್ರಾಮದ ಮುಖಂಡರೂ, ಹರಿಹರ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷರಾದ

**ಯು. ವೀರನಗೌಡ** (68 ವರ್ಷ)

ಅವರು ದಿನಾಂಕ 26.02.2022 ರ ಶನಿವಾರ ಸಂಜೆ 6 ಗಂಟೆಗೆ ಹೃದಯಾಘಾತದಿಂದ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.02.2022 ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ವಾಸನ ಗ್ರಾಮದಲ್ಲಿ ನೆರವೇರಲಿದೆ.

## ವಿಮಾ ಅಭಿಯಾನ

**(1ನೇ ಪುಟದಿಂದ)** ಇತ್ಯರ್ಥ ವಾಗಿದೆ, ರೈತರ ಬ್ಯಾಂಕ್ ಖಾತೆ ಹಾಗೂ ಆಧಾರ್ ಸಂಖ್ಯೆ ಲಭ್ಯವಿಲ್ಲದೆ ತಿರಸ್ಕೃತಗೊಂಡ 100.24 ಕೋಟಿ ರೂ. ಮೊತ್ತವನ್ನು ESCROW ಖಾತೆ ಮೂಲಕ 1.27 ಲಕ್ಷ ಅರ್ಹ ರೈತ ಫಲಾನುಭವಿಗಳಿಗೆ ನೀಡಲಾಗಿದೆ. NPCI Validation ವೈಫಲ್ಯದಿಂದಾಗಿ ಹಲವು ರೈತರಿಗೆ ಬೆಳೆ ವಿಮಾ ಪರಿಹಾರ ಮೊತ್ತ ಇತ್ಯರ್ಥವಾಗದ ಕಾರಣ, ಎಲ್ಲಾ ರೈತರು ಕಡ್ಡಾಯವಾಗಿ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಕೊಳ್ಳಲೇಬೇಕು ಎಂದರು.

# ಬದುಕಿಗೆ ಭರವಸೆ ನೀಡುವ 'ಗೆಳೆಯರು'....

## ವಿಕಲಚೇತನ ವಿದ್ಯಾರ್ಥಿಗಳಿಗೆ ಬೆಳಕು ಚೆಲ್ಲುವ ಡಾ|| ಗೋಖಲೆ

ಹಾಡು! ಈ ಗೆಳೆಯರು ಹಾಡುತ್ತಾರೆ...ಕುಣಿಯುತ್ತಾರೆ... ನಟಿಸುತ್ತಾರೆ...ನಗಿಸುತ್ತಾರೆ. ನಗು ನಗುತ್ತಲೇ ಕಷ್ಟಗಳನ್ನು ಎದುರಿಸುತ್ತಾರೆ. ಬೇರೆಯವರ ಕಷ್ಟಗಳಿಗೆ ಸ್ಪಂದಿಸುತ್ತಾರೆ. ತಮ್ಮ ಕೈಲಾದ ಸಹಾಯವನ್ನು ಮಾಡುತ್ತಾರೆ. ಇವರಾರು ಭಾರೀ ಶ್ರೀಮಂತರೇನಲ್ಲ. ಆದರೆ, ಹೃದಯ ಶ್ರೀಮಂತಿಕೆಗೆ ಕೊರತೆಯೇ ಇಲ್ಲ. ಇವರಲ್ಲಿ ವಿಜ್ಞಾನಿಗಳು, ತಂತ್ರಜ್ಞರು, ಸಾಹಿತಿಗಳು, ಕಲಾವಿದರು, ವೈದ್ಯರು, ಇಂಜಿನಿಯರ್‌ಗಳು, ಉದ್ಯಮಿಗಳು, ವಕೀಲರು, ರಾಜಕಾರಣಿಗಳು ಮತ್ತು ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರು ಇದ್ದಾರೆ. ದೇಶ-ವಿದೇಶಗಳಲ್ಲಿ ಕೆಲಸ ಮಾಡಿದವರು, ಮಾಡುತ್ತಿರುವವರು ಹಲವು ದಶಕಗಳಿಂದ ಈಗಲೂ ಸಂಪರ್ಕದಲ್ಲಿದ್ದಾರೆ. ಜಾತಿ-ಮತ, ಧರ್ಮಗಳ ಎಲ್ಲೆಗಳನ್ನು ಮೀರಿ ಮಾನವೀಯತೆಗೆ ಸ್ಪಂದಿಸುವ, ಅಂತಸ್ತು-ಅಹಂಕಾರಗಳನ್ನು ಆಚೆಗೆ ತಳ್ಳಿ, ಒಳ್ಳೊಳ್ಳೆಯ ಕೆಲಸ ಮಾಡುವ ಈ 'ಗೆಳೆಯರು' ವಿಶ್ವಾದ್ಯಂತ ತಮ್ಮ ಘಟಕಗಳನ್ನು ಆರಂಭಿಸುತ್ತಿದ್ದಾರೆ. ಇವರದ್ದೇ ಘಟಕಗಳ ಬ್ಯಾಂಕ್ ಅಕೌಂಟನ್ನು ಇವರು ತೆರೆಯಲು ಸಾಧ್ಯವಿದ್ದರೂ ಹಾಗೇ ಮಾಡುತ್ತಿಲ್ಲ. ಸಂದರ್ಭಗಳಿಗೆ ತಕ್ಕ ಹಾಗೆ ಸೇವೆಗೆ ನಿಲ್ಲುವ ಸಂಘ-ಸಂಸ್ಥೆಗಳಿಗೆ ಸಹಾಯ ಮಾಡಲು ಮುಂದಾಗುತ್ತಾರೆ. ಈ ನಿಟ್ಟಿನಲ್ಲಿ ಕೋವಿಡ್ ಕಾಲದ ಎರಡೂ ಲಾಕ್‌ಡೌನ್ ಸಮಯದಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆ, ದಾವಣಗೆರೆ ಕ್ಯಾನ್ಸರ್ ಫೌಂಡೇಷನ್, ಲೈಫ್‌ಲೈನ್ ಮುಂತಾದ ಸಂಸ್ಥೆಗಳಿಗೆ ಬೆಂಬಲ ನೀಡುತ್ತಾ ಬಂದಿದ್ದಾರೆ.

ಇದೇ ರೀತಿಯಲ್ಲಿ ಹುಬ್ಬಳ್ಳಿಯಲ್ಲಿ ಬಸವರಾಜ್ ಬಾರಿಗಿಡದ, ವಿನಾಯಕ ಎಂ. ಹಿರೇಮಠ, ರಾಜಶೇಖರ. ಕೆ. ಬಾಬ್ಲಿ, ಜಗದೀಶ್ ಹೊಸಕೋಟಿ, ಸುರೇಶ್ ಪಾಟೀಲ್ ಮುಂತಾದವರು 'ಗೆಳೆಯರು' ಬಳಗಕ್ಕೆ ಚಾಲನೆ ನೀಡಿದ್ದಾರೆ. ಹುಬ್ಬಳ್ಳಿಯ ಅತ್ಯಂತ ಸ್ಫೂರ್ತಿದಾಯಕ ವೈದ್ಯ, ಕಿಮ್ಸ್‌ನಲ್ಲಿ ಕಮ್ಯೂನಿಟಿ ಮೆಡಿಸಿನ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ|| ಸುನೀಲ್ ಗೋಖಲೆಯವರ ನೇತೃತ್ವದಲ್ಲಿ ಹಲವು ಸಾಮಾಜಿಕ ಕೆಲಸಗಳನ್ನು ಮಾಡುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಹುಬ್ಬಳ್ಳಿಯ ಗೆಳೆಯರು ದಾವಣಗೆರೆಯ ಹಲವು ಶಾಲೆಗಳಿಗೆ, ಸೇವಾ ಸಂಸ್ಥೆಗಳಿಗೆ ಭೇಟಿ ನೀಡಿದ್ದರು.

**ಸಲಹೆ ನೀಡಿ..., ಸ್ಫೂರ್ತಿ ತುಂಬಿ...ನೆರವು ನೀಡಿದ 'ಗೆಳೆಯರು'...** ದಾವಣಗೆರೆಗೆ ಬರುವ ದಾರಿಯಲ್ಲಿ ಹರಿಹರದ ಬಳಿ ಇರುವ 'ಎಜು ಏಷಿಯಾ' ಶಾಲೆಗೆ ಭೇಟಿ ನೀಡಿತು. ಅಲ್ಲಿನ ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ಡಾ|| ಸುನೀಲ್ ಗೋಖಲೆ 'ಕೇವಲ ಫಲಿತಾಂಶದ ಮೇಲೆ ಗಮನವಿಡಬೇಡಿ. ಮುಖ್ಯವಾಗಿ ಜ್ಞಾನದ ಕಡೆಗೆ ಗಮನವಿರಲಿ. ಜೊತೆಗೆ ಕಷ್ಟಗಳನ್ನು ಎದುರಿಸುವ ಛಲ ಇರಲಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ತಾವು ಎಂ.ಬಿ.ಬಿ.ಎಸ್ ಅಭ್ಯಾಸ ಮಾಡಿ ನಂತರ ಆರ್ಥೋಪಿಡಿಕ್ಸ್‌ನಲ್ಲಿ ಎಂ.ಎಸ್. ಓದುವಾಗ ಕಣ್ಣಿನ ಒಂದು ವಿಚಿತ್ರ ದೋಷದಿಂದ ದೃಷ್ಟಿಯನ್ನೇ ಶಾಶ್ವತವಾಗಿ ಕಳೆದುಕೊಂಡ ಘಟನೆಯನ್ನು ವಿವರಿಸಿದಾಗ ನೆರೆದಿದ್ದ ವಿದ್ಯಾರ್ಥಿಗಳು, ಶಿಕ್ಷಕರು ಶಾಕ್ ಆದರು. ಮುಂದುವರೆದು ಮಾತನಾಡಿದ ಡಾ|| ಸುನೀಲ್ ತಾನು ಎದೆಗುಂದದೇ ಅಂಧರು ಬಳಸುವ ಬ್ರೇಲ್ ಲಿಪಿಯನ್ನು ಕಲಿತು ಮತ್ತೆ ಎಂ.ಡಿ. ಪರೀಕ್ಷೆಯಲ್ಲಿ ತೇರ್ಗಡೆಯಾದ ವಿಷಯವನ್ನು ಹೇಳಿದಾಗ ನೆರೆದವರೆಲ್ಲಾ ಜೋರಾದ ಚಪ್ಪಾಳೆ ತಟ್ಟಿದರು. ಡಾ|| ಸುನೀಲ್ ಸಂಪೂರ್ಣ ದೃಷ್ಟಿಹೀನರಾಗಿದ್ದರಿಂದ ಅವರಿಗೆ ಹೆಚ್ಚಿನ ಅಭ್ಯಾಸ ಮುಂದುವರೆಸಲು ನಿರಾಕರಿಸಲಾಯಿತು. ಬೇಸರಗೊಳ್ಳದ ಸುನೀಲ್ ಕಮ್ಯುನಿಟಿ ಮೆಡಿಸಿನ್ ವಿಷಯದಲ್ಲಿ ಇದೇ ಕಿಮ್ಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾ ಸೈ ಎನಿಸಿಕೊಂಡಿದ್ದನ್ನು ವಿವರಿಸಿದಾಗ, ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಮೂಡಿತು. ಕಳೆದ ಇಪ್ಪತ್ತೊಂದು ವರ್ಷಗಳಿಂದ ಕಿಮ್ಸ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿರುವುದಾಗಿ ಹೇಳಿ, ತಮಗೆ ಕೆಲಸ ಮಾಡಲು ಅನುವು ಮಾಡಿಕೊಟ್ಟ ಮುಖಂಡರಿಗೆ, ಕಾಲೇಜಿನ ಅಂದಿನ ಅಧೀಕ್ಷಕರು ಹಾಗೂ ಪ್ರೋತ್ಸಾಹಿಸುತ್ತಿರುವ ಇಂದಿನ ಅಧೀಕ್ಷಕರು ಮತ್ತು ಸಿಬ್ಬಂದಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಮುಖ್ಯವಾಗಿ ಆಸಕ್ತಿಯಿಂದ ಆಲಿಸುವ ವಿದ್ಯಾರ್ಥಿಗಳು ಹಾಗೂ ಕೈ ಹಿಡಿದು ಬೆಂಬಲಿಸುತ್ತಿರುವ ಪತ್ನಿ ರೇಖಾ ಅವರ ತ್ಯಾಗವನ್ನು ಸ್ಮರಿಸಿದರು.

ನಂತರ ಮುಂಬೈನಿಂದ ಆಗಮಿಸಿದ್ದ ಡಾ|| ಸುನೀಲ್ ಗೋಖಲೆ ಅವರ ಶಾಲಾ ಮತ್ತು ಪಿ.ಯು.ಸಿ. ಸಹಪಾಠಿ, ಕೈಗಾರಿಕೋದ್ಯಮಿ ಬಸವರಾಜ್ ಬಾರಿಗಿಡದ ಮಾತನಾಡಿ, ಸ್ನೇಹಿತ ಸುನೀಲ್ ಪ್ರಾಧ್ಯಾಪಕರಾಗಿ ತೊಡಗಿಸಿಕೊಂಡಿರುವುದಲ್ಲದೇ ವಿಕಲ ಚೇತನರಿಗೆ ನೆರವಾಗಲು ತನ್ನ ಪತ್ನಿಯ ಜೊತೆ ಆಶಾಕಿರಣ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆಂದು ತಿಳಿಸಿದರು. ಈ ಸಂಸ್ಥೆಯಿಂದ ಪ್ರತಿ ವರ್ಷ ಕಾಲಿಲ್ಲದವರಿಗೆ ಕೃತಕ ಕಾಲುಗಳ ಜೋಡಣೆ, ಅಂಧರಿಗೆ ನೆರವಾಗಲು ನೇತ್ರದಾನ ಶಿಬಿರಗಳು, ರಕ್ತದಾನ ಶಿಬಿರಗಳು ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ವಿತರಿಸುವ ಕೆಲಸ ನಡೆಯುತ್ತಿದೆ ಎಂದು ಶ್ಲಾಘಿಸಿದರು. ಇತ್ತೀಚಿಗೆ ಉತ್ತರ ಕರ್ನಾಟಕ ಪ್ರಾಂತ್ಯದ ಸಕ್ಷಮ ಪ್ರತಿಷ್ಠಾನವು ವಿಕಲಚೇತನರಿಗೆ ನೆರವಾಗಲು ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ ದಿವ್ಯಾಂಗ ಸೇವಾ ಕೇಂದ್ರ ಸ್ಥಾಪಿಸಲು ಡಾ|| ಸುನೀಲ್ ಪ್ರಮುಖ ಪಾತ್ರ ವಹಿಸಿದ್ದಾರೆಂದು ತಿಳಿಸಿದರು. ಆರಂಭದಲ್ಲಿ ಗೆಳೆಯರು ಪ್ರತಿಷ್ಠಾನದ ಅರುಣ್ ಕುಮಾರ್ ಆರ್.ಟಿ. ಮಾತನಾಡಿ, ತಾನು ಡಾ|| ಸುನೀಲ್ ಗೋಖಲೆಯವರ ಸಹಪಾಠಿಯಾಗಿ ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲ್ ಹಾಗೂ ಎಚ್.ಎಸ್.ಕೆ. ಕಾಲೇಜಿನಲ್ಲಿ ಐದು ವರ್ಷ ಅಭ್ಯಾಸ ಮಾಡಿದ್ದನ್ನು ಸ್ಮರಿಸಿ ಡಾ|| ಸುನೀಲ್ ಅವರ ಬಹುಮುಖ ಪ್ರತಿಭೆಯನ್ನು ಪರಿಚಯಿಸಿದರು. ತಾನು ಕ್ಯಾನ್ಸರ್ ಗೆಲ್ಲಲು, ಕಷ್ಟಗಳನ್ನು ಎದುರಿಸಲು ಇಂತಹ ಗೆಳೆಯರೇ ನನಗೆ ಮುಖ್ಯ ಪ್ರೇರಣೆ ಎಂದು ಹೇಳಿದರು. ಎಜು ಏಷಿಯಾ ವಿದ್ಯಾರ್ಥಿನಿ ಸಂಭ್ರಮ ಎಂ.ಎಸ್. ನಿರೂಪಣೆ ಮಾಡಿದರೆ, ಸಂಸ್ಥೆಯ ಕಾರ್ಯದರ್ಶಿ ಎಂ.ಎಸ್. ಸಂತೋಷ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.




ದಾವಣಗೆರೆಯ ಆಶಾಕಿರಣ ಟ್ರಸ್ಟ್‌ನ ಮನೋವೈಕಲ್ಯದ ಮಕ್ಕಳ ಶಾಲೆಗೆ ಭೇಟಿ ಕೊಟ್ಟು ಮಕ್ಕಳೊಂದಿಗೆ ಆಟವಾಡಿದ ಡಾ|| ಸುನೀಲ್ ಗೋಖಲೆ ಮತ್ತು ಗೆಳೆಯರು.



ಸಿದ್ಧಗಂಗಾ ಶಾಲೆಯ ವಿದ್ಯಾರ್ಥಿನಿ ಕುಮಾರಿ ಯುಕ್ತಿ ಇವರಿಗೆ ದೃಷ್ಟಿ ಇಲ್ಲದವರು ಸ್ಮಾರ್ಟ್ ಫೋನ್ ಮೂಲಕ ಟಾಕ್ ಬ್ಯಾಕ್ app ಬಳಸಿ ಓದು-ಬರಹ ಮಾಡುವುದರ ಕುರಿತು ಡಾ. ಸುನೀಲ್ ಗೋಖಲೆ ಮಾಹಿತಿ ನೀಡಿದರು....



ಆಕ್ಸಿಜನ್ ಘಟಕವನ್ನು ವೀಕ್ಷಿಸಿ, ಆರ್.ಟಿ. ಮೃತ್ಯುಂಜಯ ಮತ್ತು 'ಗೆಳೆಯರು' ಕಿರು ದೇಣಿಗೆಯನ್ನು ಸಂಸ್ಥೆಯ ಕಾರ್ಯದರ್ಶಿ ಉಮೇಶ್ ಶೆಟ್ಟಿಯವರಿಗೆ ಸಲ್ಲಿಸಿದರು.

## ರೆಡ್ ಕ್ರಾಸ್ ಸಂಸ್ಥೆಯಲ್ಲಿ ಸ್ಥಾಪಿತವಾಗಲಿರುವ ಆಕ್ಸಿಜನ್ ಘಟಕಕ್ಕೆ ಗೆಳೆಯರ ಸಹಕಾರ...

*ಮೊದಲ ಲಾಕ್ ಡೌನ್ ಸಮಯದಲ್ಲಿ ಹಸಿದವರಿಗೆ 'ಅಳಿಲು ಸೇವೆ' ಎಂಬ ಕ್ರಿಯೆಯನ್ನು ಸೇವಾ ಮನೋಭಾವದ ಖ್ಯಾತ ವೈದ್ಯ ಡಾ|| ಎ. ಎಂ. ಶಿವಕುಮಾರ್ ಅವರ ನೇತೃತ್ವದಲ್ಲಿ ಇಂಡಿಯನ್ ರೆಡ್ ಕ್ರಾಸ್ ಮತ್ತು ಲೈಫ್ ಲೈನ್ ಸಹಯೋಗದೊಂದಿಗೆ 'ಗೆಳೆಯರು' ದಾವಣಗೆರೆಯಲ್ಲಿ ಮಾಡಿದರು, ಎರಡನೆಯ ಲಾಕ್ ಡೌನ್ ಸಮಯದಲ್ಲಿ ಆಕ್ಸಿಜೆನ್ ಕೊರತೆಯಿಂದ ಅಪಾರ ಸಾವು-ನೋವುಗಳು ಉಂಟಾದವು. ಇದನ್ನು ಗಮನಿಸಿದ ಡಾ|| ಎ.ಎಂ. ಶಿವಕುಮಾರ್, ಮುಂಬರುವ ದಿನಗಳಲ್ಲಿ ಇಂತಹ ಪರಿಸ್ಥಿತಿಯನ್ನು ಎದುರಿಸಲು ದಾವಣಗೆರೆಯ ರೆಡ್ ಕ್ರಾಸ್ ಸಂಸ್ಥೆಯಲ್ಲಿ ಆಕ್ಸಿಜನ್ ಘಟಕ ಸ್ಥಾಪಿಸಲು ನಿರ್ಧರಿಸಿದರು. ಈ ಆಕ್ಸಿಜನ್ ಘಟಕಕ್ಕೆ ಬೇಕಾಗುವ ಹಣ ಸಂಗ್ರಹಣೆಗೆ ಯೋಜನೆಯನ್ನು ರೂಪಿಸಿದರು.*



*ಮುಖ್ಯವಾಗಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ಆಕ್ಸಿಜನ್ ಘಟಕ ಸ್ಥಾಪನೆಯಾಗಬೇಕೆಂಬುದು ಈ ಯೋಜನೆಯ ಉದ್ದೇಶ. ದಾವಣಗೆರೆಯ ಅತ್ಯಂತ ಆದರ್ಶಮಯ, ಪೂಜನೀಯ ವೈದ್ಯ ಡಾ|| ಎಸ್.ಎಂ. ಎಲಿಯವರ ಮೂಲಕ ಈ ಕ್ರಿಯೆಗೆ ಚಾಲನೆ ನೀಡಲಾಯಿತು. ಇದಕ್ಕೆ 'ಗೆಳೆಯರು', ದಾವಣಗೆರೆ ಕ್ಯಾನ್ಸರ್ ಫೌಂಡೇಶನ್, ವರದಿಗಾರರ ಕೂಟ ಮುಂತಾದವರ ಸಹಯೋಗದೊಂದಿಗೆ ಪೂರ್ಣ ಬೆಂಬಲದೊಂದಿಗೆ ನಿಂತಿದ್ದಾರೆ. ಇಷ್ಟರಲ್ಲಿಯೇ ಸಾರ್ವಜನಿಕರ ಸಹಭಾಗಿತ್ವದಲ್ಲಿ ಈ ಘಟಕ ಆರಂಭಗೊಳ್ಳಲಿದೆ.*

☛ *ಭಾರತೀಯ ರೆಡ್ ಕ್ರಾಸ್ ಸಂಸ್ಥೆಗೆ ಭೇಟಿ ಕೊಟ್ಟ 'ಗೆಳೆಯರು' ಅಲ್ಲಿ ಸ್ಥಾಪಿತವಾಗುತ್ತಿರುವ ಆಕ್ಸಿಜನ್ ಘಟಕಕ್ಕೆ ಕಿರು ದೇಣಿಗೆಯನ್ನು ಸಂಸ್ಥೆಯ ಕಾರ್ಯದರ್ಶಿ ಉಮೇಶ್ ಶೆಟ್ಟಿಯವರಿಗೆ ಚೆಕ್ ಮುಖಾಂತರ ಸಲ್ಲಿಸಿದರು.*

☛ *ಎಸ್.ಎಸ್. ಬಡಾವಣೆಯಲ್ಲಿರುವ ಆಶಾಕಿರಣ ಟ್ರಸ್ಟ್ ಮನೋವೈಕಲ್ಯದ ಮಕ್ಕಳ ಶಾಲೆಗೆ ಭೇಟಿಕೊಟ್ಟ ಡಾ|| ಸುನೀಲ್ ಗೋಖಲೆ ಮತ್ತು ತಂಡ ಅಲ್ಲಿನ ಮಕ್ಕಳಿಗೆ ಮುದ ನೀಡುತ್ತಾ ಆಟವಾಡಿದರು.*


☛ *ಸುಕ್ಷೇಮ ಆಸ್ಪತ್ರೆಗೆ ಭೇಟಿ ನೀಡಿ ದಾವಣಗೆರೆಯಲ್ಲಿ ಕ್ಯಾನ್ಸರ್ ಫೌಂಡೇಷನ್ ಹಮ್ಮಿಕೊಳ್ಳುತ್ತಿರುವ ಕ್ಯಾನ್ಸರ್ ಜಾಗೃತಿ ಚಟುವಟಿಕೆಗಳ ಕುರಿತು ಚರ್ಚಿಸಿದರು. ಇದೇ ಸಮಯದಲ್ಲಿ ಇವರ ಮುಂದಾಳತ್ವ ವಹಿಸಿದ್ದ ಇವರ ಶಾಲಾ ಹಿರಿಯ ಸಹಪಾಠಿ ದಾವಣಗೆರೆ ರೋಟರಿ ಕ್ಲಬ್ ಅಧ್ಯಕ್ಷ ಆರ್.ಟಿ. ಮೃತ್ಯುಂಜಯ ಆಸ್ಪತ್ರೆಯಲ್ಲಿರುವ ಮಹಿಳೆಯರ ಸ್ತನ ಕ್ಯಾನ್ಸರ್ ಪರೀಕ್ಷಿಸುವ ರೋಟರಿ ಮ್ಯಾಮೋಗ್ರಾಮ್ ಸೆಂಟರನ್ನು ಗೆಳೆಯರಿಗೆ ಪರಿಚಯಿಸಿದರು.*

☛ *ವಿಕಲ ಚೇತನ ವಿದ್ಯಾರ್ಥಿಗಳಿಗೆ ಇಂಟಗ್ರೇಟೆಡ್ ಶಿಕ್ಷಣ ಕೊಡಿಸಬೇಕೆಂಬುದು ತಜ್ಞರ ಅಭಿಪ್ರಾಯ. ಅಂತಹ ಕೆಲಸವನ್ನು ಸಿದ್ಧಗಂಗಾ ಶಾಲೆ ಮಾಡುತ್ತಿದೆ ಎಂದು ಮೆಚ್ಚುಗೆ ಸೂಚಿಸಿದರು. ಡಾ|| ಸುನೀಲ್ ಅವರೊಂದಿಗೆ ಸಹಪಾಠಿಗಳಾದ ಬಸವರಾಜ್ ಬಾರಿಗಿಡದ, ವಿ.ಎನ್. ಹಿರೇಮಠ ಹಾಗೂ ರಾಜಶೇಖರ ಕೆ. ಬಾಬ್ಲಿ ದಾವಣಗೆರೆಗೆ ಬೈ ಹೇಳಿದಾಗ ಸಂಜೆ ಆರು ಗಂಟೆಯಾಗಿತ್ತು.*

**- ಅಭಿಯಂತ್**

## ಪದವಾಣಿ-12

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

| | | |
|---|---|---|
| 1) | ಭಾರತದ ರಾಷ್ಟ್ರೀಯ ವೃಕ್ಷ | 5 |
| 4) | ಚಂದ್ರನನ್ನು ಧರಿಸಿರುವ ಶಿವ | 4 |
| 5) | ದಾರಿದ್ರ್ಯ ತಿರುಗಿ ಬಂದಿದೆ | 4 |
| 7) | ಪ್ರಾಮಾಣಿಕತೆಗೆ ಹೆಸರಾದ ಪ್ರಾಣಿ | 2 |
| 8) | ಮೀನು ಹಿಡಿಯುವ ಕೊಕ್ಕೆ | 2 |
| 11) | ನಾರಿ ತಂದ ತೆಂಗಿನಕಾಯಿ ಉಲ್ಟಾ ಆಗಿದೆ | 4 |
| 12) | ಮಧುರವಾದ ನುಡಿ | 4 |
| 14) | ಗೋಳಗೊಮ್ಮಟವಿರುವ ಸ್ಥಳ | 5 |

**ಮೇಲಿನಿಂದ ಕೆಳಕ್ಕೆ :**

| | | |
|---|---|---|
| 1) | ಮಧ್ಯೆ ಯೋಧನಿರುವ ಯುದ್ಧ | 4 |
| 2) | ಸದರದಲ್ಲಿರುವ ಬೆಲೆ | 2 |
| 3) | ಭೂಮಿಯ ಕೆಳಗಿರುವ ಸಪ್ತಲೋಕಗಳಲ್ಲಿ ಒಂದು | 4 |
| 4) | ಶ್ರೀಗಂಧದ ಮರಗಳು ಬೆಳೆಯುವ ಬೆಟ್ಟ | 5 |
| 6) | ಸಂಪತ್ತಿನ ಅಧಿದೇವತೆ | 4 |
| 10) | ಕ್ಷುದ್ರಲೋಹಗಳನ್ನು ಚಿನ್ನವಾಗಿಸುವ ಕಲೆ ಮೇಲೇರಿದೆ | 4 |
| 13) | ರಾಕ್ಷಸರ ಶಿಲ್ಪಿ | 2 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 11ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ಬಸವ 3) ಸವಾರ 5) ನಡು 6) ಕ್ಷೀರ 7) ರಜನೀಕರ 11) ಭವಬಂಧನ 14) ದೂರ 15) ಅರ 16) ನಗರ 17) ಸವಾಲು.

ಮೇಲಿನಿಂದ ಕೆಳಕ್ಕೆ : 1) ಬನವಾಸಿ 2) ವನಚರ 3) ಸರಕಾರ 4) ರಸವಂತಿ 8) ಜನವ (ವನಜ) 9) ಕಬಂಧ 10) ರಸಾಂಜನ 11) ಭವದೂರ 12) ನವರಸ 13) ಅಹವಾಲು

## 17ನೇ ದಿನಕ್ಕೆ ಕಾಲಿಟ್ಟ ರಾಜನಹಳ್ಳಿ ಶ್ರೀಗಳ ಧರಣಿ

### ಸಚಿವ ಶ್ರೀರಾಮುಲು, ಸಂಸದ ರಾಜಾ ಅಮರೇಶ ನಾಯಕ ಭೇಟಿ

ಬೆಂಗಳೂರು, ಫೆ.26- ನಿವೃತ್ತ ನ್ಯಾಯಮೂರ್ತಿ ನಾಗ ಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಕ್ಕೆ (ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ) ಒತ್ತಾಯಿಸಿ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಫ್ರೀಡ್‌ಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಶನಿವಾರ 17ನೇ ದಿನಕ್ಕೆ ಕಾಲಿಟ್ಟಿದೆ.



ಗೊಲ್ಲಪಲ್ಲಿ ವಾಲ್ಮೀಕಿ ಆಶ್ರಮದ ಶ್ರೀ ವರದಾನೇಶ್ವರ ಸ್ವಾಮೀಜಿ, ಕಕ್ಕೇರಾ ಭೀಮಣ್ಣ ಮುತ್ಯಾ ಅವರು ಈ ಧರಣಿಯಲ್ಲಿ ಸಾನ್ನಿಧ್ಯ ವಹಿಸಿದ್ದರು.

ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಚಿವ ಶ್ರೀರಾಮುಲು ಅವರು ಧರಣಿಯಲ್ಲಿ ಭಾಗವಹಿಸಿ, ಶ್ರೀಗಳ ಜೊತೆ ಸುದೀರ್ಘವಾಗಿ ಚರ್ಚಿಸಿ, ನಂತರ ಚಳುವಳಿ ರಾಜಣ್ಣನವರ ಕಲಾ ತಂಡದೊಂದಿಗೆ ಹೋರಾಟದ ಗೀತೆಗಳನ್ನು ಹಾಡಿ ಗಮನ ಸೆಳೆದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ರಾಜ್ಯಾಧ್ಯಕ್ಷ ಹಾಗೂ ಡಿಎಸ್‌ಎಸ್ ಮುಖಂಡ ಎನ್.ವೆಂಕಟಸ್ವಾಮಿ ಮಾತನಾಡಿದರು. ಪ್ರತಾಪ್ ಮದಕರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ನಿವೃತ್ತ ಅಧಿಕಾರಿ ಕೆ.ಎಸ್.ಮೃತ್ಯುಂಜಯಪ್ಪ, ಹೋರಾ ಟಗಾರ ಸಿರಿಗೆರೆ ತಿಪ್ಪೇಶ್, ವಕೀಲರಾದ ಸಣ್ಣ ನಾಯಕ, ಹರ್ತಿಕೋಟೆ ವೀರೇಂದ್ರ ಸಿಂಹ, ದಾವಣಗೆರೆ ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ದೇವರಬೆಳಕೆರೆ ಮಹೇಶ್ವರಪ್ಪ, ಬಾವಿಕಟ್ಟೆ ಕರಿಬಸಪ್ಪ, ವಾಲ್ಮೀಕಿ ಮಹಾಸಭಾ ಯುವ ಘಟಕದ ರಾಜ್ಯಾಧ್ಯಕ್ಷ ತುಳಸೀರಾಮ್, ಹಾವೇರಿಯ ರಮೇಶ್ ಆನವಟ್ಟಿ, ಯಾದಗಿರಿಯ ಮರೆಪ್ಪ ನಾಯಕ ಸೇರಿದಂತೆ ವಿವಿಧ ತಾಲ್ಲೂಕುಗಳ ಮುಖಂಡರು ಈ ದಿನದ ಧರಣಿಯಲ್ಲಿ ಪಾಲ್ಗೊಂಡು ಶ್ರೀಗಳಿಗೆ ಬೆಂಬಲ ನೀಡಿದರು.

ಶುಕ್ರವಾರದ ಧರಣಿಯಲ್ಲಿ ರಾಯಚೂರು ಸಂಸದ ರಾಜಾ ಅಮರೇಶ್ ನಾಯಕ, ಮಾಜಿ ಶಾಸಕರಾದ ಗಂಗಾಧರ ನಾಯಕ, ಎಂ.ಡಿ.ಲಕ್ಷ್ಮಿನಾರಾಯಣ, ಮಹಿಮಾ ಪಟೇಲ್, ಬಿ.ಎಸ್ಪಿಯ ಮಾರಸಂದ್ರ ಮುನಿಯಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಜಾತ್ರೆಗಳಲ್ಲಿ ಸಾಮೂಹಿಕವಾಗಿ ಹಚ್ಚೆ ಹಾಕುವುದನ್ನು ನಿಷೇಧಿಸಲು ಮನವಿ

ದಾವಣಗೆರೆ, ಫೆ. 26- ಜಾತ್ರೆ, ಸಮ್ಮೇಳನ, ಸಮಾವೇಶಗಳಲ್ಲಿ ಹಚ್ಚೆ ಹಾಕುವವರ ಸಂಖ್ಯೆ ಹೆಚ್ಚಾಗುತ್ತಿದ್ದು ಮಕ್ಕಳು, ಮಹಿಳೆಯರು, ಪುರುಷರು ಎನ್ನದೆ ಸಾರ್ವಜನಿಕವಾಗಿ ಹಚ್ಚೆ ಹಾಕಿಸಿಕೊಳ್ಳುತ್ತಿರುವುದು ಕಂಡು ಬಂದಿದ್ದು ಇದನ್ನು ನಿಷೇಧಿಸಬೇಕು ಎಂದು ಹೆಲ್ಪ್‌ಲೈನ್ ಸುಭಾನ್ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.



ಜಾತ್ರೆ, ಸಮಾರಂಭಗಳು ಮುಂಬರುವ ಎರಡು ತಿಂಗಳಲ್ಲಿ ಹೆಚ್ಚಾಗಿದ್ದು, ಹಚ್ಚೆ ಹಾಕುವುದನ್ನು ಸಾರ್ವಜನಿಕ ಹಿತಾಸಕ್ತಿಯಿಂದ ನಿಷೇಧಿಸಿ, ಸಾರ್ವಜನಿಕರನ್ನು ಇದರಿಂದ ಎಚ್ಚೆತ್ತುಕೊಳ್ಳಲು ವಿನಂತಿಸಿದ್ದಾರೆ.

ಹಚ್ಚೆ ಹಾಕುವಾಗ ಯಾವುದೇ ಮುನ್ನೆಚ್ಚರಿಕೆ ವಹಿಸಿರುವುದಿಲ್ಲ. ಸೂಚಿಯನ್ನೂ ಸ್ಟೆರಿಲೈಸ್ ಮಾಡದೇ, ಬದಲಾಯಿಸದೇ ಅವೈಜ್ಞಾನಿಕವಾಗಿ ಹಚ್ಚೆಹಾಕುತ್ತಾರೆ. ಇದರಿಂದ ಮಾರಕ ಕಾಯಿಲೆಗಳು ಬರಬಹುದಾಗಿದ್ದು, ಇದನ್ನು ನಿಷೇಧಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಎಂದು ತಹಶೀಲ್ದಾರ್‌ಗೆ ಸಲ್ಲಿಸಿದ ಮನವಿಯಲ್ಲಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ವಿಶ್ವನಾಥ್, ಡಿ.ಎಂ. ಹಂಸ ಉಪಸ್ಥಿತರಿದ್ದರು.

## ಎಲ್.ಐ.ಸಿ. ಬಂಡವಾಳ ಹಿಂತೆಗೆತದಲ್ಲಿ ಶೇ.20ರಷ್ಟು ವಿದೇಶಿ ಹೂಡಿಕೆ

ನವದೆಹಲಿ, ಫೆ. 26 – ಎಲ್.ಐ.ಸಿ.ಯ ಬಂಡವಾಳ ಹಿಂತೆಗೆತದ ವೇಳೆ ಶೇ.20 ರಷ್ಟು ವಿದೇಶಿ ನೇರ ಹೂಡಿಕೆಗೆ ಸ್ವಯಂ ಚಾಲಿತ ಮಾರ್ಗವಾಗಿ ಅನುಮತಿ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಐ.ಪಿ.ಒ. ಮಾರ್ಗದ ಮೂಲಕ ಎಲ್.ಐ.ಸಿ. ಷೇರುಗಳನ್ನು ಮಾರಲು ಕೇಂದ್ರ ಸರ್ಕಾರ ಈಗಾಗಲೇ ಒಪ್ಪಿಗೆ ನೀಡಿದೆ. ಈಗಿರುವ ನಿಯಮಗಳ ಪ್ರಕಾರ ಸರ್ಕಾರಿ ಬ್ಯಾಂಕುಗಳ ಐ.ಪಿ.ಒ.ಗಳಲ್ಲಿ ಶೇ.20ರ ಹೂಡಿಕೆಗೆ ಅವಕಾಶ ಇದೆ. ಅದೇ ನಿಯಮವನ್ನು ಎಲ್.ಐ.ಸಿ.ಗೆ ಅನ್ವಯಿಸಲು ಸಂಪುಟ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

## ನಗರದಲ್ಲಿ ಇಂದು ಸಮಾಜ ಜಾಗೃತಿ ಸಮಾವೇಶ

ದಾವಣಗೆರೆ, ಫೆ.26- ಚಿತ್ರದುರ್ಗ ಜಿಲ್ಲಾ ಮಾದಿಗ ದಂಡೋರ ಸಮಿತಿ ವತಿಯಿಂದ ನಾಳೆ ದಿನಾಂಕ 27ರ ಭಾನುವಾರ ದಾವಣಗೆರೆಯಲ್ಲಿ ಎ.ಜೆ. ಸದಾಶಿವ ಆಯೋಗದ ವರದಿ ಜಾರಿಗೊಳಿಸುವಂತೆ ಆಗ್ರಹಿಸಿ ಸಮಾಜ ಜಾಗೃತಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 11.30ಕ್ಕೆ ಗಾಂಧಿನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾದಿಗ ಸಮಾಜಕ್ಕೆ ಒಳ ಮೀಸಲಾತಿ ವರ್ಗೀಕರಣಕ್ಕಾಗಿ ಸಮಾಜದಲ್ಲಿ ಜಾಗೃತಿ ಮೂಡಿಸಲು ಹಾಗೂ ಮುಂದಿನ ದಿನಗಳಲ್ಲಿ ಹೋರಾಟದ ರೂಪುರೇಷೆ ರಚಿಸುವ ಸಲುವಾಗಿ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಮಾದಿಗ ದಂಡೋರ ರಾಜ್ಯಾಧ್ಯಕ್ಷ ಬಿ. ನರಸಪ್ಪ ದಂಡೋರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ನಿಟ್ಟಿನಲ್ಲಿ ಸಮಿತಿಯು ಜಿಲ್ಲಾ ಕೇಂದ್ರಗಳಲ್ಲಿ ಜಾಗೃತಿ ಸಮಾವೇಶ ಹಮ್ಮಿಕೊಳ್ಳುತ್ತಿದೆ. ನಾಳೆ ದಿನಾಂಕ 27ರ ದಾವಣಗೆರೆ ಸಮಾವೇಶಕ್ಕೆ ಮಾದಿಗ ದಂಡೋರ ಸಮಿತಿ ರಾಷ್ಟ್ರೀಯ ಅಧ್ಯಕ್ಷ ಮಂದಕೃಷ್ಣ ಮಾದಿಗ ಆಗಮಿಸುತ್ತಿದ್ದು, ಸಮಾಜದ ಗುರುಗಳಾದ ಶ್ರೀ ಮಾದಾರ ಚೆನ್ನಯ್ಯ ಸ್ವಾಮೀಜಿ, ಶ್ರೀ ಷಡಕ್ಷರ ಮುನಿ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಹೆಚ್.ಸಿ. ಗುಡ್ಡಪ್ಪ, ಬಿ.ಹೆಚ್. ಶೇಖರಪ್ಪ, ಹುಣಸೇಕಟ್ಟೆ ಬಸವರಾಜಪ್ಪ, ಹೆಚ್. ಚಿದಾನಂದಪ್ಪ, ಟಿ. ಮಾರಣ್ಣ, ಬಿ.ಎಸ್. ಕೃಷ್ಣಮೂರ್ತಿ ಇದ್ದರು.

## ಉಕ್ರೇನ್‌ನಿಂದ 219 ಭಾರತೀಯರು ವಾಪಸ್

**ಇನ್ನೂ 250 ಜನ ಬುಕಾರೆಸ್ಟ್‌ನಿಂದ ಬರುವ ಹಾದಿಯಲ್ಲಿ**

ನವದೆಹಲಿ, ಫೆ. 26 – ಉಕ್ರೇನ್‌ನಲ್ಲಿ ಸಿಲುಕಿದ್ದ 219 ನಾಗರಿಕರನ್ನು ರೊಮೇನಿಯ ಮೂಲಕ ಭಾರತಕ್ಕೆ ಕರೆ ತರಲಾಗಿದೆ. ಇನ್ನೂ 250 ಜನರು ವಾಪಸ್ಸಾಗುವ ಹಾದಿಯಲ್ಲಿದ್ದಾರೆ. ಬುಕಾರೆಸ್ಟ್‌ನಿಂದ ಬರುತ್ತಿರುವ ಎರಡನೇ ವಿಮಾನದಲ್ಲಿ 250 ಜನರಿದ್ದಾರೆ. ಭಾರತೀಯರನ್ನು ವಾಪಸ್ ಕರೆ ತರುವ ಕಾರ್ಯಾಚರಣೆಗೆ ಆಪರೇಷನ್ ಗಂಗಾ ಎಂಬ ಹೆಸರಿಡಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ತಿಳಿಸಿದ್ದಾರೆ. ರಷ್ಯಾ ಸೈನ್ಯ ಉಕ್ರೇನ್ ರಾಜಧಾನಿ ಕೀವ್ ತಲುಪುತ್ತಿರುವ ಹಿನ್ನೆಲೆಯಲ್ಲಿ, ಭಾರತೀಯರನ್ನು ತೆರವುಗೊಳಿಸುವ ಕಾರ್ಯಕ್ಕೆ ಸವಾಲುಗಳು ಎದುರಾಗಿವೆ. ಉಕ್ರೇನ್‌ನಲ್ಲಿ 16 ಸಾವಿರದಷ್ಟು ಭಾರತೀಯರಿದ್ದಾರೆ.

## ವಿಮಾನ ಪತನ : ಪೈಲಟ್ ಸಾವು

ಹೈದರಾಬಾದ್, ಫೆ. 26 – ಖಾಸಗಿ ವೈಮಾನಿಕ ಅಕಾಡೆಮಿಗೆ ಸೇರಿದ ವಿಮಾನ ಪತನಗೊಂಡಾಗ ಅದರಲ್ಲಿದ್ದ ಮಹಿಳಾ ತರಬೇತಿ ಪೈಲಟ್ ಸಾವನ್ನಪ್ಪಿದ ಘಟನೆ ತೆಲಂಗಾಣದ ನಲ್ಗೊಂಡ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನೆರೆಯ ಆಂಧ್ರ ಪ್ರದೇಶದಿಂದ ಬಂದಿದ್ದ ವಿಮಾನ, ಮಧ್ಯಾಹ್ನ ಜಿಲ್ಲೆಯ ಹಳ್ಳಿಯೊಂದರಲ್ಲಿ ಬಿದ್ದಿದೆ. ಮಹಿಳಾ ತರಬೇತಿ ಪೈಲಟ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.


**ಶ್ರೀ ಬಾಲಾಜಿ ಕಂಪ್ಯೂಟರ್ಸ್ ಅಂಗಡಿ ಸ್ಥಳಾಂತರ**

ಈ ಹಿಂದೆ ಪ್ರವಾಸಿ ಮಂದಿರ ರಸ್ತೆ, ಮಹಾನಗರ ಪಾಲಿಕೆ ಮಳಿಗೆ ನಂ. 11ರಲ್ಲಿ ಇದ್ದ **ಶ್ರೀ ಬಾಲಾಜಿ ಕಂಪ್ಯೂಟರ್ಸ್** ಅಂಗಡಿಯನ್ನು ಈಗ ಮಹಿಳಾ ಸಮಾಜ ಕಾಂಪ್ಲೆಕ್ಸ್ ಮಳಿಗೆ ನಂ.4, ಶಾಂತಿ ಪಾರ್ಕ್ ಹೋಟೆಲ್ ರಸ್ತೆ ಇಲ್ಲಿಗೆ ಸ್ಥಳಾಂತರಿಸಲಾಗಿದೆ. ಗ್ರಾಹಕರು ಎಂದಿನಂತೆ ಸಹಕರಿಸಬೇಕಾಗಿ ವಿನಂತಿ.

**93427 57755, 08192 231215 95382 36923**

**PR ಹೋಂ ನರ್ಸಿಂಗ್**

KTJ Nagar, 2nd Main, 5th Cross, Davangere. Ph. : 97415 62814

**NAGARATHNAMMA B.A.**

*Reg. Staff Nurse, Davangere.*

IVIM Injection, IVF Fluid at Home, Blood Drawing for Investigtion, Bed Bath for Bedreden Patient & Report Issue at Bapuji Hospital, Physiotherapy for Paralysis Patient, All with Doctor's Prescription Only, All Reports at Bapuji Hospital

**Every Sunday Free Consultancy Time : 10.00 am to 10 pm**

**ಜಮೀನು / ಪೋಲ್ಸ್ ಫ್ಯಾಕ್ಟರಿ ಮಾರಾಟಕ್ಕಿದೆ**

ಬೋರಗೊಂಡನಹಳ್ಳಿ (ಆಲೂರು ಹಟ್ಟಿ) ವ್ಯಾಪ್ತಿಯಲ್ಲಿ 2 ಎಕರೆ 24 ಗುಂಟೆ ಪ್ರದೇಶದಲ್ಲಿ 2 ಎಕರೆ ಇಂಡಸ್ಟ್ರೀಯಲ್ ಅಲಿನೇಶನ್ ಆಗಿದ್ದು 2 ಬೋರ್‌ವೆಲ್, ಸಿಮೆಂಟ್ ಗೋಡೌನ್, ಲೇಬರ್ ಕ್ವಾರ್ಟರ್ಸ್ ವ್ಯವಸ್ಥೆ ಇದೆ. ಫ್ಯಾಕ್ಟರಿ ಸಹಿತವಾದರೂ ಸರಿ, ಇಲ್ಲವೇ ಖಾಲಿ ನಿವೇಶನ ಆದರೂ ಸರಿ ಮಾರಾಟಕ್ಕೆ ಲಭ್ಯವಿದೆ. ಆಸಕ್ತರು ಸಂಪರ್ಕಿಸಿ :

**ಫೋ. : 94483 84471, 90081 22333**

**MAHA AUTOMOBILE DAVANAGERE**

**WANTED**

| SL. No. | Name of the Position | No of Vecancy |
|---|---|---|
| 1 | Sales Manager (with Minimum Exp of 5 Years in two wheeler sales) | 1 |
| 2 | Sales Executive (Female) (with Minimum 2 Years Exp in Sales) | 2 |
| 3 | Sales Executive (Male) (with Minimum 2 Years Exp in Sales) | 3 |
| 4 | Mechanic (with Minimum Exp of 2 Years as Mechanic) | 4 |
| 5 | Spare Executive (Minimum Exp of 1 year in Spares) | 1 |

Contact Number
7624999241, 72046 33314, 70221 15555
Mail Id : *mahaautomobile55@gmail.com*

# ವಾರ ಭವಿಷ್ಯ

**ದಿನಾಂಕ : 27.02.2022 ರಿಂದ 05.03.2022**
**– ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ನೀವು ಸರ್ಕಾರಿ ಉನ್ನತಾಧಿಕಾರಿಗಳಾಗಿದ್ದಲ್ಲಿ ವರ್ಗಾವಣೆಗೆ ಈಗಲೇ ಮಾನಸಿಕವಾಗಿ ಸಿದ್ಧರಾಗಿರುವುದು ಉತ್ತಮ. ಮತ್ತೊಬ್ಬರು ನೆರವಾಗುವರೆಂಬ ಹುಸಿ ನಿರೀಕ್ಷೆ ಬೇಡ. ವ್ಯವಹಾರದಲ್ಲಿ ಸಾಕಷ್ಟು ಅಭಿವೃದ್ಧಿ ಕಂಡು ಬರಲಿದೆ. ಆದಾಯದ ಮೂಲದಲ್ಲಿ ಕ್ರಮೇಣ ಹೆಚ್ಚಳವಾಗಲಿದೆ. ವಿದ್ಯುತ್ ಅಥವಾ ಬೆಂಕಿಯ ಮುಂದೆ ಕೆಲಸ ಮಾಡುವವರು ಸಾಕಷ್ಟು ಎಚ್ಚರದಿಂದಿರುವುದು ಮೇಲು. ಮಂಗಳ, ಬುಧ, ಗುರು ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಖಾಸಗಿ ವಲಯದಲ್ಲಿ ಕೆಲಸ ಮಾಡುವವರು ಮೇಲಾಧಿಕಾರಿಗಳ ಅವಕೃಪೆಗೆ ಗುರಿಯಾಗಲಿದ್ದಾರೆ. ಕೌಟುಂಬಿಕ ವಿಷಯಗಳನ್ನು ಜಾಣ್ಮೆಯಿಂದ ನಿರ್ವಹಿಸಿರಿ. ಹಣಕಾಸಿನ ಹರಿವು ಉತ್ತಮವಾಗಿರುವುದರಿಂದ ಚಿಂತೆ ಬೇಡ. ರೈತಾಪಿ ಮಿತ್ರರಿಗೆ ಸರ್ಕಾರದಿಂದ ಸಿಗುವುದು ಭರವಸೆ ಮಾತ್ರ. ಆದ್ದರಿಂದ ಅದನ್ನೇ ನಂಬಿಕೊಂಡಿರುವುದರಲ್ಲಿ ಅರ್ಥವಿಲ್ಲ. ಲೋಹದ ವ್ಯಾಪಾರಿಗಳಿಗೆ ವಹಿವಾಟು ಹೆಚ್ಚಲಿದೆ. ಭಾನು, ಶುಕ್ರ, ಶನಿವಾರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘು, ಔ, ಚ.ಕೆ.ಕೋ.ಹ.)**

ಗುತ್ತಿಗೆದಾರರಿಗೆ ಹೆಚ್ಚಿನ ಅವಕಾಶಗಳು ದೊರೆಯಬಹುದಾದರೂ, ಹಳೆ ಬಾಕಿ ಬರುವುದು ತಡವಾಗಬಹುದು. ವಿದ್ಯಾರ್ಥಿಗಳು ಅಧ್ಯಯನದ ಕಡೆ ಗಮನವಿಡುವುದು ಉತ್ತಮ. ವಾಹನ ಮಾರಾಟಗಾರರಿಗೆ ಹೆಚ್ಚಿನ ಲಾಭವಾಗಲಿದೆ. ಪೂಜಾ ಪರಿಕರಗಳು ಹೆಚ್ಚು ಮಾರಾಟವಾಗಲಿವೆ. ಲೇಖಕರು ಹಾಗೂ ಪ್ರಕಾಶಕರ ಮಧ್ಯೆ ಉತ್ತಮ ಹೊಂದಾಣಿಕೆಯಾಗಲಿದೆ. ವೈಯಕ್ತಿಕ ಆರೋಗ್ಯವನ್ನು ಅಲಕ್ಷಿಸಬೇಡಿ. ಸೋಮ, ಬುಧ, ಗುರು ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಉದ್ಯಮವನ್ನು ವಿಸ್ತರಿಸುವ ಮೊದಲು ಬರಬೇಕಾದ ಆರ್ಥಿಕ ಮೂಲವನ್ನು ಹೊಂದಿಸಿಕೊಳ್ಳುವುದು ಮೇಲು, ಸಮಾಜ ಸೇವೆಯಲ್ಲಿರುವ ಮಹಿಳೆಯರಿಗೆ ಸಾರ್ವಜನಿಕರಿಂದ ಗೌರವ ಸಂದಾಯವಾಗಲಿದೆ. ಮತ್ತೊಬ್ಬರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಮೊದಲು ತುಸು ಯೋಚಿಸುವುದು ಉತ್ತಮ. ಚಿಕ್ಕಮಕ್ಕಳ ಆರೋಗ್ಯದಲ್ಲಿ ತೀವ್ರ ವ್ಯತ್ಯಾಸವಾಗುವ ಸಂಭವವಿದೆ. ಸೋಮ, ಮಂಗಳ, ಶುಕ್ರ ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಆದಾಯವು ನಿರೀಕ್ಷಿತ ಮಟ್ಟದಲ್ಲಿರುವುದರಿಂದ ಚಿಂತೆ ಬೇಡ. ಕೃಷಿಕರು, ಬೇಸಾಯದ ವಿಸ್ತರಣೆಗೆ ಹೆಚ್ಚಿನ ಬಂಡವಾಳ ಹೂಡುವರು. ಮಕ್ಕಳಿಂದ ಕೇಳುವ ಒಳ್ಳೆಯ ಸುದ್ದಿ ಮನಸ್ಸಿಗೆ ನೆಮ್ಮದಿ ತರಲಿದೆ. ಸಹೋದ್ಯೋಗಿಗಳೊಂದಿಗೆ ವಿನಕಾರಣ ವಾಗ್ವಾದ ಬೇಡ, ಅವಿವಾಹಿತರಿಗೆ ಸಂಬಂಧಗಳು ಕೂಡಿಬರಲಿವೆ. ಕರಿದ ಪದಾರ್ಥಗಳ ಅತಿ ಸೇವನೆಯಿಂದ ದೇಹದಲ್ಲಿ ತುರಿಕೆ ಕಾಣಿಸಿಕೊಳ್ಳುವುದು. ಭಾನು, ಗುರು, ಶುಕ್ರ, ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಬಹುದಿನಗಳಿಂದ ಸಂತಾನಾಪೇಕ್ಷೆಗಳಾಗಿದ್ದವರಿಗೆ ಶುಭ ಸಮಾಚಾರವೊಂದು ಕೇಳಬಹುದು. ತುಟಿಮೀರಿ ಬಂದ ಮಾತು ನಿಮ್ಮ ಉದ್ಯೋಗಕ್ಕೆ ಕಂಟಕ ತರಬಹುದು. ರಾಜಕಾರಣಿಗಳು ಪಕ್ಷಕ್ಕೆ ತೋರಿದ ನಿಷ್ಠೆಯ ಫಲವನ್ನು ಪಡೆಯಲಿದ್ದಾರೆ. ಹಣಕಾಸಿನ ಪರಿಸ್ಥಿತಿಯಲ್ಲಿ ಕ್ರಮೇಣ ಚೇತರಿಕೆ, ಹಿರಿಯರೊಂದಿಗೆ ವಿನಾಕಾರಣ ವಾಗ್ವಾದ ಬೇಡ. ಮಡದಿ ತವರಿನಿಂದ ನೆರವು ದೊರೆಯಲಿದೆ. ಸೋಮ, ಬುಧ, ಗುರು, ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಮನೆ ಅಥವಾ ನಿವೇಶನಗಳ ಮಾರಾಟದಿಂದ ಮಧ್ಯವರ್ತಿಗಳಿಗೆ ಹೆಚ್ಚಿನ ಕಮಿಷನ್ ದೊರೆಯಲಿದೆ. ಮಕ್ಕಳ ನಡಾವಳಿಯಲ್ಲಿ ಕಂಡುಬರುತ್ತಿರುವ ವ್ಯತ್ಯಾಸದಿಂದಾಗಿ ಮನೆಯಲ್ಲಿ ಮಾತಿನ ಬಿರುಸು ಹೆಚ್ಚಾಗಲಿದೆ. ಅತಿಯಾಗಿ ನಂಬಿದವರಿಂದಲೇ ಮುಜುಗರಕ್ಕೆ ಒಳಗಾಗುವಿರಿ. ರಾಜಕಾರಣಿಗಳಿಂದ ದೂರವಿರುವುದು ಉತ್ತಮ, ನ್ಯಾಯಾಂಗ ವ್ಯಾಜ್ಯಗಳು ಕಾರಣಾಂತರಗಳಿಂದ ಮುಂದೆ ಹೋಗಲಿವೆ. ಆದಾಯದಲ್ಲಿ ಏರಿಕೆ, ಗುರು, ಶುಕ್ರ, ಶನಿವಾರ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಜಾಹೀರಾತು ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಹೆಚ್ಚಿನ ಲಾಭವಾಗಲಿದೆ. ವಿದ್ಯಾರ್ಥಿಗಳು ಬಂದಿರುವ ಅವಕಾಶಗಳನ್ನು ತಮ್ಮ ವಿಳಂಬ ರೀತಿಯಿಂದಾಗಿ ಕೈಚೆಲ್ಲುವರು. ಶಸ್ತ್ರ ವೈದ್ಯರಿಗೆ ಉತ್ತಮ ಬೇಡಿಕೆ ಬರಲಿದೆ. ಆರ್ಥಿಕವಾಗಿ ಚೇತರಿಕೆ ಕಂಡರೂ ಉಳಿತಾಯ ಮಾತ್ರ ಶೂನ್ಯ, ಮಡದಿ ಮಕ್ಕಳ ಕೋರಿಕೆಗಳನ್ನು ಈಡೇರಿಸದೆ ವಿಧಿಯಿಲ್ಲ. ಹಿರಿಯರ ಆರೋಗ್ಯದಲ್ಲಿ ಹೆಚ್ಚಿನ ವ್ಯತ್ಯಾಸವಾಗುವ ಸಂಭವವಿರುವುದರಿಂದ ದೂರದೂರುಗಳಿಗೆ ಪ್ರಯಾಣ ಖಂಡಿತಾ ಬೇಡ. ಭಾನು, ಮಂಗಳ, ಬುಧ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಅತಿಯಾದ ಮೋಜು-ಮಸ್ತಿಗಳೆಂದು ತಿರುಗುವುದರಿಂದ ಗಳಿಕೆ ಹಾಗೂ ಉಳಿತಾಯದ ಗಂಟು ಕರಗಬಹುದು. ಅರಿವಿಗೆ ಬಾರದೇ ಹೋಗಬಹುದು. ವಾದ್ಯ ವೃಂದದವರಿಗೆ ಬೇಡಿಕೆ ಹೆಚ್ಚಲಿದೆ. ಮತ್ತೊಬ್ಬರ ಸಮಸ್ಯೆಗಳನ್ನು ಬಗೆಹರಿಸಲು ಹೋಗಿ ನೀವೇ ತೊಂದರೆಗೆ ಸಿಲುಕುವ ಸಂಭವವಿದೆ. ಪ್ರಭಾವೀ ವ್ಯಕ್ತಿಗಳನ್ನು ಓಲೈಸಲು ಹೋಗಿ ಅವರಿಂದಲೇ ನಿಂದಾವಾಕ್ಯಗಳನ್ನು ಕೇಳಬೇಕಾದೀತು. ವ್ಯಾಪಾರದಲ್ಲಿ ಹೆಚ್ಚಿನ ಪ್ರಗತಿ ನಿರೀಕ್ಷಿಸಬಹುದು. ಅಮೂಲ್ಯ ವಸ್ತುಗಳು ಕಳುವಾಗಬಹುದು. ಭಾನು, ಸೋಮ, ಮಂಗಳವಾರ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಒಡಹುಟ್ಟಿದವರಿಂದ ಮಾತ್ರವಲ್ಲದೇ ಬಂಧುಗಳಿದಲೂ ನೆರವು ಸಿಗುವುದರಿಂದ ಮನೆ ಕಟ್ಟುವ ಅಥವಾ ಕೊಳ್ಳುವ ವಿಚಾರವನ್ನು ಮಾಡಬಹುದು. ಸಣ್ಣ ಮತ್ತು ಮಧ್ಯಮ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಾಕಷ್ಟು ನೆರವು ದೊರೆಯಲಿದೆ. ಆದಾಯದ ಮೂಲದಲ್ಲೂ ಸಾಕಷ್ಟು ಹೆಚ್ಚಳ ಕಂಡು ಬರುವುದರಿಂದ ಆರ್ಥಿಕ ಸಮಸ್ಯೆ ಬಗೆಹರಿಯಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿ ಕಂಡುಬರಲಿದೆ. ಸೋಮ, ಬುಧ, ಶನಿವಾರ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಹಿರಿಯರ ಮಾರ್ಗದರ್ಶನದಂತೆ ನಡೆಯುವುದರಲ್ಲೇ ನಿಮ್ಮ ಹಿತವಡಗಿದೆ. ಪ್ರಾಪ್ತ ವಯಸ್ಕರಾದ ಮಕ್ಕಳನ್ನು ವ್ಯಾಪಾರದಲ್ಲಿ ತೊಡಗಿಸಿಕೊಂಡಲ್ಲಿ ಅವರಿಗೆ ಅನುಭವ, ನಿಮಗೆ ತುಸು ವಿಶ್ರಾಂತಿ ದೊರೆಯಲಿದೆ. ಬಂಧುಗಳ ಮಧ್ಯೆಯಿರುವ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸುವಿರಿ. ವಿರೋಧಿಗಳೊಂದಿಗೆ ಸೌಹಾರ್ದತೆಯಿಂದ ನಡೆದುಕೊಳ್ಳುವುದು ಮೇಲು, ಸ್ವಲ್ಪ ಮಟ್ಟಿಗೆ ಆರ್ಥಿಕ ಚೇತರಿಕೆ ಕಾಣಲಿದೆ. ಮಿತ್ರರಿಗೆ ನೆರವು ನೀಡುವಿರಿ, ಭಾನು, ಗುರು, ಶನಿವಾರ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಸನ್ಮಾರ್ಗದಲ್ಲಿ ನಡೆಯುತ್ತಿರುವವರಿಗೆ ಕುಟುಂಬದಲ್ಲೂ ಹಾಗೂ ಸಮಾಜದಲ್ಲೂ ಗೌರವ ಸಲ್ಲಲಿದೆ. ಪ್ರತಿಯೊಬ್ಬರನ್ನೂ ಅನುಮಾನ ದೃಷ್ಟಿಯಿಂದ ನೋಡುವುದನ್ನು ಬಿಡಿ, ಉದ್ಯೋಗದಲ್ಲಿರುವವರಿಗೆ ವರ್ಗಾವಣೆ, ಸಂಪನ್ಮೂಲದಲ್ಲಿ ಆಗಾಗ ಕೊರತೆ ಕಂಡು ಬರುವುದರಿಂದ ಖರ್ಚು-ವೆಚ್ಚಗಳ ಮೇಲೆ ಹಿಡಿತ ಮಾಡುವುದು ಅನಿವಾರ್ಯವಾಗಲಿದೆ. ಅನಿರೀಕ್ಷಿತ ಪ್ರಸಂಗದಿಂದಾಗಿ ಪ್ರೇಮ ವಶಕ್ಕೆ ಸಿಲುಕುವಿರಿ. ಸೋಮ, ಗುರು, ಶುಕ್ರವಾರ ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 1.03.2022ನೇ ಮಂಗಳವಾರ ಮಹಾಶಿವರಾತ್ರಿ, ಜಾಗರಣೆ.**

## ನಗರದಲ್ಲಿ ಇಂದು ಯಕ್ಷಗಾನ ಪ್ರದರ್ಶನ ಉದ್ಘಾಟನೆ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷರಂಗ-ಯಕ್ಷಗಾನ ಸಂಸ್ಥೆ ಹಾಗೂ ಶ್ರೀ ವೀರೇಶ್ವರ ಪುಣ್ಯಾಶ್ರಮದ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ 5 ಗಂಟೆಗೆ ಶ್ರೀ ವೀರೇಶ್ವರ ಪುಣ್ಯಾಶ್ರಮದ ಹೊರ ಬಯಲು ರಂಗಮಂದಿರದಲ್ಲಿ, ದಾವಣಗೆರೆ ಯಕ್ಷರಂಗ ಕಲಾವಿದರಿಂದ ನಡೆಯುವ ಯಕ್ಷಗಾನ ಪ್ರದರ್ಶನವನ್ನು ಅಂತರರಾಷ್ಟ್ರೀಯ ಖ್ಯಾತಿಯ ಯಕ್ಷಗಾನ ಮಹಿಳಾ ಕಲಾವಿದೆ ಶ್ರೀಮತಿ ಕಿರಣ್ ಡಾ. ರವಿ ಪೈಯವರು ಉದ್ಘಾಟಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಮಲ್ಯಾಡಿ ಪ್ರಭಾಕರ ಶೆಟ್ಟಿ ವಹಿಸಿಕೊಳ್ಳಲಿದ್ದು, ಮುಖ್ಯ ಅತಿಥಿಗಳಾಗಿ ಎ.ಹೆಚ್. ಶಿವಮೂರ್ತಿಸ್ವಾಮಿ, ಕೆ.ಹೆಚ್. ಮಂಜುನಾಥ್, ಹೇಮಾ ಶಾಂತಪ್ಪ ಪೂಜಾರಿ ಆಗಮಿಸಲಿದ್ದಾರೆ.

ಸಭಾ ಕಾರ್ಯಕ್ರಮದ ನಂತರ 'ಕನಸು ಕಂಡ ಕಂಸ' ಕಥಾನಕದ ಯಕ್ಷಗಾನ ಪ್ರದರ್ಶನ ಏರ್ಪಾಡಾಗಿದೆ.

# ಆನ್‌ಲೈನ್ ಮಾಹಿತಿ ನೀರಿನ ಮೇಲಿನ ರಂಗೋಲಿ

## ಖಚಿತವಲ್ಲದ ಮಾಹಿತಿ ಬಗ್ಗೆ ಎಚ್ಚರ ವಹಿಸಲು ಸಾಹಿತಿ ಡಾ. ತಾರಿಣಿ ಶುಭದಾಯಿನಿ ಕಿವಿಮಾತು



**ಟಿ.ಎಸ್. ಶೈಲಜಾ ಅವರ 'ಜಲಸಿರಿಯ ಸೊಬಗು' ಪುಸ್ತಕ ಬಿಡುಗಡೆ**

ದಾವಣಗೆರೆ, ಫೆ. 26 – ಮಾಹಿತಿಗಾಗಿ ಆನ್‌ಲೈನ್ ಅವಲಂಬನೆ ಅನಿವಾರ್ಯ. ಆದರೆ, ಅಲ್ಲಿನ ಬರಹಗಳು ನೀರಿನ ಮೇಲಿನ ರಂಗೋಲಿಯಂತೆ ಎಂಬ ಎಚ್ಚರಿಕೆ ಇರಬೇಕು. ವಾಟ್ಸಆಪ್ ಸೇರಿದಂತೆ ಹಲವು ಆನ್‌ಲೈನ್ ಜಾಲತಾಣಗಳ ಮಾಹಿತಿ ಖಚಿತವಲ್ಲ ಎಂದು ಚಿತ್ರದುರ್ಗದ ಹಿರಿಯ ಸಾಹಿತಿ ಡಾ. ತಾರಿಣಿ ಶುಭದಾಯಿನಿ ಹೇಳಿದ್ದಾರೆ.

ನಗರದ ಗಿರಿಶೈಲ ಪ್ರಕಾಶನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತಾಶ್ರಯದಲ್ಲಿ ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ ಆಯೋಜಿಸಲಾಗಿದ್ದ ಟಿ.ಎಸ್. ಶೈಲಜಾ ಅವರ 'ಜಲಸಿರಿಯ ಸೊಬಗು' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡುತ್ತಿದ್ದರು.

ಆನ್‌ಲೈನ್ ಬರವಣಿಗೆ ಜ್ಞಾನದ ಮೋಸವಾಗಿದೆ. ಯೂಟ್ಯೂಬ್, ವಾಟ್ಸಆಪ್ ಮುಂತಾದ ಕಡೆಗಳಲ್ಲಿ ತಪ್ಪು, ಕ್ಲೀಷೆಯ ಮಾಹಿತಿ ಇರುತ್ತದೆ. ಇಲ್ಲಿ ಸತ್ಯಕ್ಕಿಂತ ಮಾಯೆಯೊಳಗಿನ ಮಾಯೆಯೇ ಹೆಚ್ಚಾಗಿರುತ್ತದೆ ಎಂದವರು ಹೇಳಿದರು.

ಆದರೆ, ಪುಸ್ತಕಗಳು ಹತ್ತಾರು ವರ್ಷಗಳವರೆಗೆ ಮಾಹಿತಿ ನೀಡುತ್ತವೆ. ಪುಸ್ತಕಗಳಲ್ಲಿನ ಮಾಹಿತಿಯ ಖಚಿತತೆಯನ್ನು ವರ್ಷಗಳ ನಂತರವೂ ಪ್ರಶ್ನಿಸುವ ಸಾಧ್ಯತೆ ಇರುವುದರಿಂದ, ಬರಹಗಾರರು ಸಾಕಷ್ಟು ಎಚ್ಚರಿಕೆ ವಹಿಸುತ್ತಾರೆ ಎಂದವರು ಅಭಿಪ್ರಾಯ ಪಟ್ಟರು.

ಯುವ ಪೀಳಿಗೆ ಸಂವಹನ ಮಾಧ್ಯಮದ ಕಡೆ ವಾಲುತ್ತಿದೆ. ಈ ಮಾಧ್ಯಮದಲ್ಲಿ ಸಂಘರ್ಷ ಹೆಚ್ಚಾಗಿದೆ. ಹೀಗಾಗಿ ಪರಿಸ್ಥಿತಿ ತುಂಬಾ ಸೂಕ್ಷ್ಮವಾಗಿದ್ದು, ಚಿನ್ನ ತೂಕ ಮಾಡಿದಂತೆ ಮಾತನಾಡುವ ಅಗತ್ಯ ಬಂದಿದೆ ಎಂದವರು ಹೇಳಿದರು.

ಕನ್ನಡ ಸಾಹಿತ್ಯದಲ್ಲಿ ಕ್ಷೇತ್ರ ದರ್ಶನ ಹಾಗೂ ಪ್ರವಾಸ ಕಥನ ಕಡಿಮೆ. ಈ ಕ್ಷೇತ್ರ ಸವಾಲಿನದ್ದು. ಮಹಿಳೆಯರು ಪ್ರವಾಸ ಕಥನ ಬರೆಯುವುದು ಇನ್ನೂ ಕಡಿಮೆ. ಶೈಲಜಾ ಅವರು ಜಲಪಾತಗಳ ಕುರಿತ ಜಲಸಿರಿಯ ಸೊಬಗು ಪುಸ್ತಕ ಬರೆದಿರುವುದು ಅಭಿನಂದನಾರ್ಹ ಎಂದರು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಮಾಜಿ ಮೇಯರ್ ಎಸ್.ಟಿ. ವೀರೇಶ್, ಜ್ಞಾನ ಹಾಗೂ ಪ್ರಬುದ್ಧತೆ ಪಡೆಯಲು ಸಾಹಿತ್ಯ ಜೀವನದ ಅವಿಭಾಜ್ಯ ಅಂಗವಾಗಿದೆ. ಈ ಹಿನ್ನೆಲೆಯಲ್ಲಿ ಯುವಜನರಲ್ಲಿ ಓದುವ ಹಾಗೂ ಸಾಹಸ ಮನೋಭಾವವನ್ನು ಹೆಚ್ಚಿಸುವ ಅಗತ್ಯವಿದೆ ಎಂದರು.

ಪುಸ್ತಕ ಕುರಿತು ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಹಾಗೂ ಜಾನಪದ ಚಿಂತಕ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ, ನೈಸರ್ಗಿಕ ಜಲಪಾತಗಳು ಮನಮೋಹಕವಾಗಿರುತ್ತವೆ. ಕರ್ನಾಟಕದಲ್ಲಿ 500ಕ್ಕೂ ಹೆಚ್ಚು ಜಲಪಾತಗಳಿವೆ. ಈ ಪೈಕಿ 24 ಜಿಲ್ಲೆಗಳ 230ಕ್ಕೂ ಹೆಚ್ಚು ಜಲಪಾತಗಳ ಚಿತ್ರಣವನ್ನು ಶೈಲಜಾ ಅವರು ತಮ್ಮ ಕೃತಿಯಲ್ಲಿ ನೀಡಿದ್ದಾರೆ ಎಂದರು.

ವೇದಿಕೆಯ ಮೇಲೆ ಲೇಖಕಿ ಟಿ.ಎಸ್. ಶೈಲಜಾ, ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷೆ ಮಲ್ಲಮ್ಮ ನಾಗರಾಜ್ ಉಪಸ್ಥಿತರಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

# ಹೊನ್ನಾಳಿಯಲ್ಲಿ ಪತ್ರಕರ್ತರ ಸಂಘದಿಂದ ಮತ ಯಾಚನೆ



ಹೊನ್ನಾಳಿ, ಫೆ.26- ನಾಳೆ ದಿನಾಂಕ 27 ರ ಭಾನುವಾರ ದಾವಣಗೆರೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯತ್ವಕ್ಕೆ ಚುನಾವಣೆ ನಡೆಯಲಿದ್ದು, ಹೊನ್ನಾಳಿ ತಾಲ್ಲೂಕಿನ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರು ನಮ್ಮ 25 ಜನರ ತಂಡಕ್ಕೆ ಸಂಪೂರ್ಣ ಬೆಂಬಲ ನೀಡಬೇಕು ಎಂದು ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಇ.ಎಂ. ಮಂಜುನಾಥ ಹಾಗೂ ಹಾಲಿ ಅಧ್ಯಕ್ಷ ವೀರಪ್ಪ ಎಂ. ಬಾವಿ ಅವರುಗಳು ಮನವಿ ಮಾಡಿದರು.

ನಗರದ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರ ಸಮಸ್ಯೆಗಳನ್ನು ಆಲಿಸಿ, ಮತಯಾಚನೆ ಮಾಡಿದ ಸಂದರ್ಭದಲ್ಲಿ ಅವರು ಮಾತನಾಡಿದರು.

ಪತ್ರಿಕಾ ಭವನ ನಿರ್ಮಾಣ ಮಾಡುವುದು ಈ ಬಾರಿ ನಮ್ಮ ಪ್ರಮುಖ ಉದ್ದೇಶ ಮತ್ತು ಗುರಿಯಾಗಿದೆ. ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಲಾಗುವುದು, ನಂತರ ಪತ್ರಕರ್ತರಿಗೆ ಆರೋಗ್ಯ ಕಾರ್ಡ್ ಸೇರಿದಂತೆ ಇತರೆ ಸೌಲಭ್ಯಗಳನ್ನು ಕೊಡಿಸುವ ಕುರಿತು ಪ್ರಯತ್ನ ನಡೆಸಲಾಗುವುದು ಎಂದರು.


ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಣ್ಣ ಮಾತನಾಡಿ, ಶಿವಾನಂದ್ ತಗಡೂರು ಅವರು ರಾಜ್ಯ ಸಂಘದ ಅಧ್ಯಕ್ಷರಾಗಿ ಪುನರ್ ಆಯ್ಕೆಯಾಗಿದ್ದಾರೆ. ಅವರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ದಾವಣಗೆರೆಯಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ ಸಹಾಯ, ಸಹಕಾರ ಕೊಡುವಂತೆ ಮನವಿ ಮಾಡಲಾಗುವುದು ಎಂದರು.

ಹೊನ್ನಾಳಿ ತಾಲ್ಲೂಕು ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎನ್.ಕೆ. ಆಂಜನೇಯ, ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿ ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿ ಟಿ. ಶ್ರೀನಿವಾಸ್ ಮಾತನಾಡಿ, ಜಿಲ್ಲಾ ಸಂಘದ ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಿದ್ದು, ಬೆಂಬಲಿಸುವಂತೆ ಮನವಿ ಮಾಡಿದ ಅವರು, ಕಳೆದ ಎಂಟತ್ತು ವರ್ಷಗಳಿಂದ ಗ್ರಾಮೀಣ ಭಾಗದ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ ಸೌಲಭ್ಯ, ಉಚಿತ ಆರೋಗ್ಯ ಕಾರ್ಡ್ ಹಾಗೂ ನಿವೇಶನಗಳನ್ನು ಕೊಡಿಸುವ ಕುರಿತು ಮಾತನಾಡಲಾಗುತ್ತಿದೆ. ಈ ಬಗ್ಗೆ ಸಂಘಟಿತ ಪ್ರಯತ್ನ ನಡೆಸಬೇಕು ಎಂದರು. ಪತ್ರಕರ್ತರು 60 ರ ವಯೋಮಿತಿಯ ನಿವೃತ್ತಿಯ ನಂತರ ಪಿಂಚಣಿ ಸೌಲಭ್ಯ ಕೊಡಿಸುವ ನಿಟ್ಟಿನಲ್ಲಿ ಸಂಘವು ಪ್ರಯತ್ನ ನಡೆಸಬೇಕು ಎಂದು ಸಲಹೆ ನೀಡಿದರು.

ತಾಲ್ಲೂಕು ಸಂಘದ ಅಧ್ಯಕ್ಷ ಮೃತ್ಯುಂಜಯ ಪಾಟೀಲ್ ಅವರು ಮಾತನಾಡಿದರು. ಪತ್ರಕರ್ತ ಕೋರಿ ಯೋಗೀಶ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಯು.ಬಿ. ಜಯಪ್ಪ ವಂದಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆಯ ಎಚ್.ಎಂ.ಪಿ. ಕುಮಾರ್, ಜೆ.ಎಸ್. ವೀರೇಶ್, ಹನುಮಂತಪ್ಪ ಹಾಲಿವಾಣ, ಆರ್.ಎಸ್. ತಿಪ್ಪೇಸ್ವಾಮಿ, ಇಂದುಶೇಖರ್ ನಿಶಾನಿಮಠ್ ಉಪಸ್ಥಿತರಿದ್ದರು.

## ಜಿಲ್ಲೆಗೆ ಅಂಚೆ ಅಧೀಕ್ಷಕರ ವಿಭಾಗೀಯ ಕಚೇರಿ ಮಂಜೂರು : ಕೆ.ಚಂದ್ರಣ್ಣ ಸಂತಸ





ದಾವಣಗೆರೆ, ಫೆ.26- ದಾವಣಗೆರೆ ಜಿಲ್ಲೆಗೆ ಪ್ರತ್ಯೇಕ ಅಂಚೆ ಅಧೀಕ್ಷಕರ ವಿಭಾಗೀಯ ಕಚೇರಿಯನ್ನು ಮಂಜೂರು ಮಾಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕರೂ ಆದ ಹಿರಿಯ ಪತ್ರಿಕೋದ್ಯಮಿ ಕೆ. ಚಂದ್ರಣ್ಣ ಸ್ವಾಗತಿಸಿದ್ದಾರೆ.

ಈ ಸಂಬಂಧ ಸರ್ಕಾರದ ಮೇಲೆ ಒತ್ತಡ ತಂದು ಅಂಚೆ ಅಧೀಕ್ಷಕರ ವಿಭಾಗೀಯ ಕಚೇರಿ ಮಂಜೂರು ಮಾಡಿಸುವಲ್ಲಿ ಶ್ರಮಿಸಿರುವ ಲೋಕ ಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಅವರಿಗೆ ಚಂದ್ರಣ್ಣ ಕೃತಜ್ಞತೆ ಸಲ್ಲಿಸಿದ್ದಾರೆ. 1984ರಲ್ಲಿ ದಾವಣಗೆರೆ ನಗರಾಭಿವೃದ್ಧಿ ಮಂಡಳಿಯ ದಿ. ಟಿ.ಜಿ. ಶಿವಯೋಗಪ್ಪ ಅಧ್ಯಕ್ಷತೆ ಮತ್ತು ತಾವು ಸದಸ್ಯರಾಗಿದ್ದ ಸಂದರ್ಭದಲ್ಲಿ ಮುಂದಾಲೋಚನೆಯಿಂದ ಅಂಚೆ ಅಧೀಕ್ಷಕರ ವಿಭಾಗೀಯ ಕಚೇರಿಗಾಗಿಯೇ 100x100 ಅಳತೆಯ ನಿವೇಶನವನ್ನು ದಾವಣಗೆರೆ ನಗರಾಭಿವೃದ್ಧಿ ಮಂಡಳಿಯಿಂದ ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿ ಮಂಜೂರು ಮಾಡಿ ಕಾಯ್ದಿರಿಸಲಾಗಿತ್ತು ಎಂದು ಚಂದ್ರಣ್ಣ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಗೆ ಅಂಚೆ ಅಧೀಕ್ಷಕರ ವಿಭಾಗೀಯ ಕಚೇರಿಯನ್ನು ಮಂಜೂರು ಮಾಡಿಸುವಂತೆ ಕಳೆದ ಸುಮಾರು 7-8 ವರ್ಷಗಳಿಂದ ಸಿದ್ದೇಶ್ವರ ಅವರಿಗೆ ಲಿಖಿತ ಮನವಿ ಸಲ್ಲಿಸಿ ಒತ್ತಡ ತರುತ್ತಿದ್ದೆ. ಇದೀಗ ಆ ನನ್ನ ಕನಸು ಈಡೇರಿದೆ ಎಂದು ಚಂದ್ರಣ್ಣ ಸಂತಸ ವ್ಯಕ್ತಪಡಿಸಿದ್ದಾರೆ.

## ಕರವೇಯಿಂದ ಸಾಮಾಜಿಕ ಜಾಲತಾಣ ಕಾರ್ಯಾಗಾರ

**ನಗರದಲ್ಲಿ ಇಂದು**

ದಾವಣಗೆರೆ, ಫೆ. 26 - ನಾಳೆ ದಿನಾಂಕ 27ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಗುರುಭವನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳಿಗೆ ಸಾಮಾಜಿಕ ಜಾಲತಾಣ ಕಾರ್ಯಾಗಾರ ಹಾಗೂ ನಾಯಕತ್ವ ಶಿಬಿರ ಆಯೋಜಿಸಲಾಗಿದೆ ಎಂದು ವೇದಿಕೆಯ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಅವರು, ಕಾರ್ಯಾಗಾರವನ್ನು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ವಾಮದೇವಪ್ಪ ಉದ್ಘಾಟಿಸಲಿದ್ದಾರೆ ಎಂದರು. ಕರವೇ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಗುಂಡಣ್ಣನವರ್ ಉಪನ್ಯಾಸ ನೀಡಲಿದ್ದಾರೆ. ಕರವೇ ಜಿಲ್ಲಾ ಗೌರವಾಧ್ಯಕ್ಷ ವಾಸುದೇವ ರಾಯ್ಕರ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳು : ಸಜಿತ್, ಸಚ್ಚಿನ್ ಗಾಣಿಗೇರ್, ಪ್ರಶಾಂತ್, ಬಸಮ್ಮ . ಪತ್ರಿಕಾಗೋಷ್ಠಿಯಲ್ಲಿ ಕರವೇ ಮುಖಂಡರಾದ ಮಲ್ಲಿಕಾರ್ಜುನ, ಜಬೀಲ್, ಎಂ.ಡಿ. ರಫೀಕ್, ಕೆ.ಜಿ. ಬಸವರಾಜ, ಗೋಪಾಲ ದೇವರಮನಿ, ಶ್ರೀನಿವಾಸ, ರಘು ಮತ್ತಿತರರು ಉಪಸ್ಥಿತರಿದ್ದರು.

## ಬೆಳ್ಳೂಡಿ ಶಾಖಾಮಠದಲ್ಲಿ ಇಂದು ಪೂರ್ವಭಾವಿ ಸಭೆ

ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾಮಠದ 6ನೇ ವರ್ಷದ ವಾರ್ಷಿಕೋತ್ಸವ ಮತ್ತು ಹರಿಹರ ತಾ. ಮಟ್ಟದ ಕನಕ ಜಯಂತ್ಯೋತ್ಸವ ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಇಂದು ಬೆಳಿಗ್ಗೆ 10.30ಕ್ಕೆ ಬೆಳ್ಳೂಡಿ ಶಾಖಾ ಮಠದಲ್ಲಿ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಹರಿಹರ ತಾಲ್ಲೂಕು ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ. ಗಂಗಾಧರ್ ತಿಳಿಸಿದ್ದಾರೆ.

## ಉಕ್ರೇನ್‌ನಲ್ಲಿನ ಭಾರತೀಯರನ್ನು ಸುರಕ್ಷಿತವಾಗಿ ಕರೆ ತರಲು ಮನವಿ

ದಾವಣಗೆರೆ, ಡಿ.26- ಉಕ್ರೇನ್‌ನಲ್ಲಿರುವ ಎಲ್ಲಾ ಭಾರತೀಯರನ್ನು ಸುರಕ್ಷಿತವಾಗಿ ಕರೆ ತರಲು ಭಾರತೀಯ ಸೌಹಾರ್ದ ಸಂಘ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಷ್ಟ್ರೀಯ ಅಧ್ಯಕ್ಷ ಎನ್.ಎಂ. ಆಂಜನೇಯ ಗುರೂಜಿ, ಪ್ರಧಾನ ಕಾರ್ಯದರ್ಶಿ ಬುತ್ತಿ ಹುಸೇನ್ ಪೀರ್ ಅವರುಗಳು, ದೇಶದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳಬೇಕು. ಸೌಹಾರ್ದ ವಾತಾವರಣ ನಿರ್ಮಾಣವಾಗಬೇಕು. ಚಿಕ್ಕ ಪುಟ್ಟ ವಿಷಯಗಳಿಗೆ ಜನರು ತಲೆ ಕೆಡಿಸಿಕೊಳ್ಳಬಾರದು ಎಂದು ಮನವಿ ಮಾಡಿದ್ದಾರೆ. ಎಸ್.ಬಿ. ಮಹಬೂಬ್, ಅಂಜುಮ್ ಹುಸೇನ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ನಗರದಲ್ಲಿ ಇಂದು ಪ್ರಶಾಂತಿ ಧರ್ಮೋತ್ಸವ

ಶ್ರೀ ಸತ್ಯಸಾಯಿ ಸೇವಾ ಕ್ಷೇತ್ರ, ಸತ್ಯಂ-ಶಿವಂ-ಸುಂದರಂ ವತಿಯಿಂದ 'ಪ್ರಶಾಂತಿ ಧರ್ಮೋತ್ಸವ' ಸಮಾರಂಭ ಇಂದು ನಡೆಯಲಿದೆ.

ಬೆಳಿಗ್ಗೆ 5.15 ಕ್ಕೆ ಓಂಕಾರ, ಸುಪ್ರಭಾತ, ನಗರದ ಸಂಕೀರ್ತನೆ. 8 ಗಂಟೆಗೆ ಪ್ರಶಾಂತ್‌ಕುಮಾರ್ ಎಸ್. ಅವರಿಂದ ಪ್ರಶಾಂತಿ ಧ್ವಜಾರೋಹಣ, 9 ಗಂಟೆಗೆ ಭಗವಾನ್ ಸಾಯಿಬಾಬಾ ಭಾವಚಿತ್ರ ಸಹಿತ ಪಲ್ಲಕ್ಕಿ ಉತ್ಸವ, 9.30 ಕ್ಕೆ ಗಣಹೋಮ, ಶ್ರೀ ಸಾಯಿ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12.30 ಕ್ಕೆ ಭಕ್ತ ಸಮಾವೇಶ, ಶ್ರೀ ಶಿವಾನಂದ ಸ್ವಾಮಿಗಳಿಂದ ಆಶೀರ್ವಚನ.

ಮುಖ್ಯ ಅತಿಥಿಗಳು : ಶ್ರೀಮತಿ ವಸಂತ ಶಂಕರ್‌ರಾಮನ್, ಶ್ರೀ ಸಾಯಿ ಚಿಂತನ ಜಗನ್ನಾಥ ನಾಡಿಗೇರ್ ಅವರಿಂದ.

ಸಂಜೆ 6 ಕ್ಕೆ ಶ್ರೀ ಸಾಯಿ ಸಂಗೀತ ಸಂಧ್ಯಾ, 6.30 ಕ್ಕೆ ಭಜನೆ. 6.30 ರಿಂದ ವಿದುಷಿ ಶ್ರೀಮತಿ ಸಂಗೀತ ಎಸ್. ವೆರ್ಣೇಕರ್ ಅವರಿಂದ ಸಂಗೀತ ಕಾರ್ಯಕ್ರಮ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ.


**ಹುಟ್ಟುಹಬ್ಬದ ಶುಭಾಶಯಗಳು**



ಇಂದಿನ ನವ ಪೀಳಿಗೆಗೆ ಧಾರ್ಮಿಕ, ಅಧ್ಯಾತ್ಮಿಕ ಹಾಗೂ ಯುವಕರನ್ನು ನಾಚಿಸುವಂತಹ, ನೇರವಂತಿಕೆ ನಿಷ್ಠೂರವಾದಿ ತಮ್ಮ 84ರ ಹರೆಯದಲ್ಲೂ ಮನುಷ್ಯರಾಗಿ ಹುಟ್ಟಿರುವವರು ಹೀಗೆಯೇ ಇರಬೇಕು ಎನ್ನುವುದಕ್ಕೆ ದಾವಣಗೆರೆಯ ಸಂತ ಮುತ್ಸದ್ಧಿ **ಮೆರವಣಿಗೆ ಶಿವಪ್ಪ** ನವರಿಗೆ ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟದ ವತಿಯಿಂದ **"ಯೋಗ ಭೀಷ್ಮ"** ಬಿರುದಾಂಕಿತ ಶುಭಾಶಯಗಳನ್ನು ಸಮರ್ಪಿಸುತ್ತಿದ್ದೇವೆ. ನಮ್ಮ ಜಿಲ್ಲೆಯ ನ್ಯಾಮತಿಯಲ್ಲಿ ಜನಿಸಿ ಆಗಿನ ಕಾಲದಲ್ಲೇ ಲೋಕೋಪಯೋಗಿ ಇಲಾಖೆಯಲ್ಲಿ ಇಂಜಿನಿಯರ್ ಆಗಿ ಅವಿಸ್ಮರಣೀಯ ಸೇವೆಯನ್ನು ಸಲ್ಲಿಸಿದ ಶ್ರೀಯುತರು ಧರ್ಮಪತ್ನಿ ಅನುಸೂಯಮ್ಮನವರನ್ನು ವಿವಾಹವಾಗಿ ನಾಲ್ಕು ಮುತ್ತಿನಂತಹ ಮಕ್ಕಳನ್ನು ಪಡೆದು ಇವರು, ಮನೆಯಲ್ಲಿ ಇಂಜಿನಿಯರ್‌ಗಳ ಕಾರ್ಖಾನೆಯನ್ನು ಸ್ಥಾಪಿಸಿದಂತವರು (ಮಕ್ಕಳು, ಮೊಮ್ಮಕ್ಕಳು ಸೇರಿ ಸುಮಾರು 12 ಜನ). ಇವರ ಒಬ್ಬ ಮಗ ನ್ಯೂಜಿಲೆಂಡ್‌ನಲ್ಲಿ, ಇನ್ನೊಬ್ಬರು ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾಗಿ ಇದ್ದರೂ ಸಹ ಇವರು ಮಾತ್ರ ಇನ್ನೂ ಸಹ ಸಾವಿರಾರು ಕೋಟಿಗಳ ವ್ಯವಹಾರದ ಅಮೃತ್ ಕನ್‌ಸ್ಟ್ರಕ್ಷನ್ ನಲ್ಲಿ ಎಂ.ಡಿ. ಯವರಾದ ಪಿ. ವೆಂಕಟೇಶ್ವರ ರಾವ್ ಅವರ ಅತೀ ನಿಷ್ಠಾವಂತರಾಗಿ ರಾಜ್ಯಾದ್ಯಂತ ಕೆಲಸ ನಿರ್ವಹಿಸುತ್ತಿದ್ದಾರೆ. ದಾವಣಗೆರೆಯ ಶ್ರೀ ಶಿರಡಿ ಸಾಯಿಬಾಬಾ ಮಂದಿರದ ಶ್ರೇಯೋಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿರಿಸಿದ್ದಾರೆ. ಕಳೆದ ನಲವತ್ತು ವರ್ಷಗಳ ಸುದೀರ್ಘ ಸೇವೆಯನ್ನು ಬಾಬಾರವರ ಪಾದಾರವಿಂದಗಳಿಗೆ ಸಮರ್ಪಿಸಿದ್ದಾರೆ. ಇಲ್ಲೊಂದು ಸುಸಜ್ಜಿತ ಮಂದಿರ ತಲೆ ಎತ್ತಿ ನಿಲ್ಲುವಲ್ಲಿ ಶಿವಪ್ಪನವರ ಪರಿಶ್ರಮ ಅಗಾಧವಾಗಿದೆ. ಪ್ರಸ್ತುತ ಕಾರ್ಯದರ್ಶಿಗಳಾಗಿ ಭಕ್ತ ವೃಂದದ ಸೇವೆಗೆ ಟೊಂಕಕಟ್ಟಿ ನಿಂತಿದ್ದಾರೆ. ಇವರಿಗೆ ಆಡಳಿತ ಮಂಡಳಿಯು ತುಂಬು ಹೃದಯದ ಸಹಕಾರ ನೀಡುತ್ತಿದೆ. ಜೊತೆಗೆ ಬಾಬಾ ಸೇವಾಕರ್ತರಿಗೆಲ್ಲಾ ನಮ್ಮ ಪ್ರೀತಿಯ **"ಅಪ್ಪಾಜಿ"** ಎಂದೇ ಪ್ರಖ್ಯಾತಿ ಪಡೆದಿದ್ದಾರೆ. ಇದರ ಹೊರತಾಗಿಯೂ ನಗರದ ಪ್ರತಿಷ್ಠಿತ ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟದ ಗೌರವಾಧ್ಯಕ್ಷರಾಗಿ, ನಿರಂತರ ಸೇವೆ ಸಲ್ಲಿಸುತ್ತಿರುವ ಅಪರೂಪ ವ್ಯಕ್ತಿತ್ವದ ಮಾಣಿಕ್ಯದಂತಿರುವ

**ಎಂ. ಶಿವಪ್ಪನವರಿಗೆ 85ನೇ ವರ್ಷದ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು**

**ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ (ರಿ).**

ಬಿ.ಸಿ. ಉಮಾಪತಿ, ಅಧ್ಯಕ್ಷರು
ಲ|| ವಾಸುದೇವ್ ರಾಯ್ಕರ್, ಪ್ರಧಾನ ಕಾರ್ಯದರ್ಶಿಗಳು
ಡಾ|| ಯು. ಸಿದ್ದೇಶ್, ಗೌರವ ಸಲಹೆಗಾರರು

**ಹುಟ್ಟುಹಬ್ಬದ ಶುಭಾಶಯಗಳು**



ದಿನಾಂಕ 27.2.2022ರಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಶ್ರೀ ಶಿರಡಿ ಸಾಯಿ ಬಾಬಾ ಮಂದಿರದ ಕಾರ್ಯದರ್ಶಿಗಳೂ, ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟದ ಗೌರವಾಧ್ಯಕ್ಷರೂ ಆದ

**ಶ್ರೀ ಎಂ. ಶಿವಪ್ಪ**

ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

**ಎಸ್.ಜಿ. ಉಳುವಯ್ಯ, ಎಸ್.ಯು. ಆಕಾಶ್**
**ಶ್ರೀ ಚನ್ನಬಸವೇಶ್ವರ ರೈಸ್ ಟೆಕ್**
ಬಸಾಪುರ ರಸ್ತೆ, ದಾವಣಗೆರೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ

**ಪಂಚಕರ್ಮ ಚಿಕಿತ್ಸೆಗಳು ಶೇಕಡ 60% ರಷ್ಟು ರಿಯಾಯಿತಿಯಲ್ಲಿ**

* ಚರ್ಮರೋಗದ (ಸೋರಿಯಾಸಿಸ್) ಚಿಕಿತ್ಸೆ * ಎಲ್ಲಾ ತರಹದ ನೋವುಗಳಿಗೆ ಚಿಕಿತ್ಸೆ
(ಚಿಕಿತ್ಸೆಗೆ ಬಳಸುವ ಔಷಧಿ ಉಚಿತವಾಗಿ ದೊರೆಯುತ್ತದೆ)
ಈ ಶಿಬಿರವು 1 ತಿಂಗಳ ಕಾಲ (ಮಾರ್ಚ್ 01 ರಿಂದ 31ರವರೆಗೆ) ಏರ್ಪಡಿಸಲಾಗಿದೆ.
ಆಸಕ್ತರು ಫೆಬ್ರವರಿ 28ರೊಳಗೆ ಆಸ್ಪತ್ರೆಗೆ ಖುದ್ದು ಭೇಟಿ ನೀಡಿ ಹೆಸರು ನೋಂದಾಯಿಸಬೇಕು.
(ವಿ.ಸೂ. ಈ ಶಿಬಿರಕ್ಕೆ ಮೊದಲೇ ನೋಂದಾಯಿಸಿದ 10 ಜನರಿಗೆ ಮಾತ್ರ)
ಹೆಚ್ಚಿನ ಮಾಹಿತಿಗಾಗಿ :

**ಅನ್ವಯ ಆಯುರ್ವೇದ ಆಸ್ಪತ್ರೆ**
ANVAYA
#1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ
ಫೋ: 08192 252228 ಮೊ: 86186 42929

**ತೇಜಸ್ ಡಯಗ್ನಾಸ್ಟಿಕ್ ಸೆಂಟರ್**
**ಬೇಕಾಗಿದ್ದಾರೆ**

- ಡ್ಯೂಟಿ ಡಾಕ್ಟರ್ಸ್ (Duty Doctor) - 5
- ಲ್ಯಾಬ್ ಟೆಕ್ನೀಷಿಯನ್ಸ್ (Lab Technician) - 10
- ಜಿ.ಎನ್.ಎಂ. ನರ್ಸ್ (G.N.M. Nurse) - 10
- ಡ್ರೈವರ್ (Driver) - 2
- ಡಾಟಾ ಎಂಟ್ರಿ (Data Entry) - 5

No. 389/1-2, Basappa Tower, 8th Main, 8th Cross, P.J. Extention, Davanagere-2. **Mob: 85488 81212**

# ಜಾತಿ ಆಧಾರಿತ ಮೀಸಲಾತಿಗಿಂತ ಎಲ್ಲಾ ಜಾತಿ, ಜನಾಂಗದ ಬಡವರಿಗೆ, ರೈತರಿಗೆ ಮೀಸಲಾತಿ ವ್ಯವಸ್ಥೆ ಜಾರಿಗೆ ಬರಬೇಕು

## ನೀಲಗುಂದ ಗುಡ್ಡದ ವಿರಕ್ತ ಮಠದ ಪೀಠಾಧಿಪತಿಗಳಾದ ಶ್ರೀ ಚನ್ನಬಸವ ಶಿವಯೋಗಿಗಳು ಆಶಯ



ಹರಪನಹಳ್ಳಿ, ಫೆ. 26- ಜಾತಿ ಆಧಾರಿತ ಮೀಸಲಾತಿಗಿಂತ ಎಲ್ಲಾ ಜಾತಿ-ಜನಾಂಗದ ಬಡವರಿಗೆ, ರೈತರಿಗೆ ಮೀಸಲಾತಿ ವ್ಯವಸ್ಥೆ ಜಾರಿಗೆ ಬರಬೇಕು ಎಂದು ನೀಲಗುಂದ ಗುಡ್ಡದ ವಿರಕ್ತ ಮಠದ ಪೀಠಾಧಿಪತಿಗಳಾದ ಶ್ರೀ ಚನ್ನಬಸವ ಶಿವಯೋಗಿಗಳು ಆಶಯ ವ್ಯಕ್ತಪಡಿಸಿದರು.

ತಾಲ್ಲೂಕಿನ ನೀಲಗುಂದ ಗ್ರಾಮದ ಗುಡ್ಡದ ವಿರಕ್ತಮಠದ ಆವರಣದಲ್ಲಿ ಮೂರು ದಿನಗಳ ಕಾಲ ಜಂಗಮ ಜಾತ್ರೆ ಅಂಗವಾಗಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಸಹಯೋಗದಲ್ಲಿ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಇತ್ತೀಚೆಗೆ ಮೀಸಲಾತಿ ಹೋರಾಟಗಳು ಜಾಸ್ತಿಯಾಗುತ್ತಿದ್ದು, ಜಂಗಮರು, ಲಿಂಗಾಯಿತರು, ಕುರುಬರು, ವಾಲ್ಮೀಕಿ ನಾಯಕರು ಮೀಸಲಾತಿ ಬಗ್ಗೆ ಹೋರಾಟ ಮಾಡುತ್ತಿದ್ದು, ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರ ಮೀಸಲಾತಿ ಹೆಚ್ಚಳ ಮಾಡಬೇಕು. ಎಲ್ಲಾ ಜಾತಿ, ಜನಾಂಗದ ಹಾಗೂ ರೈತರಿಗೆ, ಬಡವರಿಗೆ ಮೀಸಲಾತಿ ಸಿಗಬೇಕು ಎಂಬುದು ನಮ್ಮ ಆಶಯವಾಗಿದೆ ಎಂದರು.

ಹೆಣ್ಣು ಜಗದ ಕಣ್ಣು, ಹೆಣ್ಣಿಗೆ ಹೆಣ್ಣೆ ಶತ್ರು ಎಂಬ ಮಾತು ಹೋಗಬೇಕು. ಭ್ರಷ್ಟಾಚಾರ ನಿರ್ಮೂಲನೆಯಾಗಬೇಕಾದರೆ ಹೆಣ್ಣು ಮಕ್ಕಳಿಂದಲೇ ಸಾಧ್ಯ ಎಂದರು.

ಪುರಸಭೆ ಮಾಜಿ ಸದಸ್ಯ ಅರುಣ ಪೂಜಾರ್ ಮಾತನಾಡಿ, ನೀಲಗುಂದ ಗ್ರಾಮದ ಗುಡ್ಡದ ವಿರಕ್ತಮಠದ ಆವರಣದಲ್ಲಿ ಮೂರು ದಿನಗಳ ಕಾಲ ಜಂಗಮ ಜಾತ್ರೆ ಜರುಗುತ್ತಿದ್ದು, ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿಯವರು ಕಾಯಕ ಯೋಗಿಗಳಾಗಿದ್ದು, ಹರಪನಹಳ್ಳಿ ತಾಲ್ಲೂಕನ್ನು 371 ಜೆ ಗೆ ಒಳಪಡಿಸಬೇಕೆಂದು ದಾವಣಗೆರೆ ಜಿಲ್ಲಾಧಿಕಾರಿಯವರ ಕಚೇರಿ ಮುಂದೆ ಉಪವಾಸ ಸತ್ಯಾಗ್ರಹ, ಹರಪನಹಳ್ಳಿ ಜಿಲ್ಲಾ ಕೇಂದ್ರವಾಗಬೇಕು ಎಂದು ಹೋರಾಟ ಸೇರಿದಂತೆ ಹತ್ತು ಹಲವು ಹೋರಾಟಗಳನ್ನು ಮಾಡಿಕೊಂಡು ಬಂದಿರುವ ಶ್ರೀಗಳ ಜೊತೆ ನಾವು ಸದಾ ಇರುತ್ತೇವೆ ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್‌ನ ತಾಲ್ಲೂಕು ಅಧಿಕಾರಿ ನಾಗರತ್ನಮ್ಮ ಹೆಗಡೆ ಮಾತನಾಡಿ, ಹಿಂದೂ ಧರ್ಮ ಸನಾತನ ಧರ್ಮವಾಗಿದ್ದು, ನಾವೆಲ್ಲಾ ನಮ್ಮ ಧರ್ಮವನ್ನು ಪೂಜಿಸಿ, ಗೌರವಿಸಬೇಕು. ಇತರೆ ಧರ್ಮಗಳಿಗೆ ಧಕ್ಕೆ ಬರದಂತೆ ಪ್ರೀತಿಯಿಂದ ನೋಡಿಕೊಳ್ಳಬೇಕು. ಇತ್ತೀಚೆಗೆ ತಂದೆ-ತಾಯಂದಿರು ತಮ್ಮ ಮಕ್ಕಳು ಡಾಕ್ಟರ್, ಇಂಜಿನಿಯರ್ ಆಗಬೇಕು, ಉನ್ನತ ಹುದ್ದೆಯಲ್ಲಿರಬೇಕೆಂದು ಬಯಸುತ್ತಾರೆ. ಆದರೆ ಉನ್ನತ ಹುದ್ದೆಯಲ್ಲಿರುವವರು ತಮ್ಮ ತಂದೆ-ತಾಯಂದಿರನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಿರುವುದು ದುಃಖದ ಸಂಗತಿಯಾಗಿದೆ. ನಾವುಗಳು ನಮ್ಮ ಮಕ್ಕಳಿಗೆ ಉತ್ತಮ ಪ್ರಜೆಯಾಗಬೇಕು. ಉತ್ತಮ ಸಂಸ್ಕಾರವಂತರಾಗಬೇಕು ಎನ್ನುವ ಚಿಂತನೆ ಮಾಡಬೇಕಿದೆ ಎಂದರು.

ಬಿಜಾಪುರ ಜಿಲ್ಲೆಯ ಇಟ್ಟಿಗಿ ಶ್ರೀ ಗುರು ಶಾಂತ ಶಿವಾಚಾರ್ಯ ಸ್ವಾಮೀಜಿ, ಗುಡ್ಡದ ಆನ್ವೇರಿ ಮಠದ ಶ್ರೀ ಶಿವಯೋಗೇಶ್ವರ ಸ್ವಾಮೀಜಿ ಕಾರ್ಯ ಕ್ರಮದ ನೇತೃತ್ವ ವಹಿಸಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಹರಪನಹಳ್ಳಿಯ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಅಧ್ಯಕ್ಷರು, ದಾನ ಚಿಂತಾಮಣಿ ಹೆಚ್.ಎಂ. ಲಲಿತಮ್ಮ, ಬೈರಾಪುರದ ದ್ರಾಕ್ಷಾಯಣಮ್ಮ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಕ್ಕಮಹಾದೇವಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್‌ನ ರುದ್ರೇಶ್, ಭೀಮಾನಾಯ್ಕ, ಅಯ್ಯಪ್ಪಸ್ವಾಮಿ ದೇವಸ್ಥಾನದ ಉಪಾಧ್ಯಕ್ಷ ಗಿರೀಶ್, ಯುವ ಮುಖಂಡ ಅಶೋಕ್ ಉಪಸ್ಥಿತರಿದ್ದರು.

# ನಾಳೆ ಹರಿಹರ ನಗರಸಭೆ ಅಧ್ಯಕ್ಷರ ರಾಜೀನಾಮೆ



ಹರಿಹರ, ಫೆ.26 - ನಾವು ಕಾಂಗ್ರೆಸ್ ಪಕ್ಷಕ್ಕೆ ಮಾತು ಕೊಟ್ಟಿರುವಂತೆ ನಾಡಿದ್ದು ದಿನಾಂಕ 28 ರ ಸೋಮವಾರ ನಮ್ಮ ಜೆಡಿಎಸ್ ಪಕ್ಷದ ನಗರಸಭಾ ಅಧ್ಯಕ್ಷರಾದ ರತ್ನ ಉಜ್ಜೇಶ್ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂದು ಮಾಜಿ ಶಾಸಕ ಹೆಚ್.ಎಸ್ ಶಿವಶಂಕರ್ ತಿಳಿಸಿದರು.

ನಗರದ ಜೆಡಿಎಸ್ ಕಛೇರಿಯಲ್ಲಿ ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ನಗರಸಭೆಯ ಅಧಿಕಾರ ಹಿಡಿಯಲು ಆರು ತಿಂಗಳ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿತ್ತು. ಈ ಮಾತಿನಂತೆ ಆರು ತಿಂಗಳಿಗೆ ರಾಜೀನಾಮೆ ನೀಡಬೇಕಾಗಿತ್ತು. ಆದರೆ, ನಮ್ಮ ಅಧ್ಯಕ್ಷ ಅವಧಿಯಲ್ಲಿ ಎಂಎಲ್ಸಿ ಹಾಗೂ ನಗರಸಭೆ ಉಪ ಚುನಾವಣೆಗಳು ಬಂದ ಕಾರಣ ನಾಲ್ಕು ತಿಂಗಳು ವಿಳಂಬವಾಯಿತು ಎಂದರು.

ಇದಲ್ಲದೇ ಕಾಂಗ್ರೆಸ್ ಪಕ್ಷದ ನಗರಸಭೆಯ ಸದಸ್ಯರು ಒಡಂಬಡಿಕೆಯಂತೆ ನಮ್ಮ ಸದಸ್ಯರೊಂದಿಗೆ ಸಹಕಾರ ನೀಡದ ಪರಿಣಾಮವಾಗಿ ನಮ್ಮ ಅಧ್ಯಕ್ಷ ಅವಧಿಯಲ್ಲಿ ನಮ್ಮ ನಿರೀಕ್ಷೆಯಂತೆ ನಗರವನ್ನು ಅಭಿವೃದ್ಧಿ ಮಾಡಲು ಆಗಲಿಲ್ಲ ಎಂದು ವ್ಯಾಕುಲತೆ ವ್ಯಕ್ತಪಡಿಸಿದರು.

ಇದಲ್ಲದೆ ಶಾಸಕರು ಸರ್ಕಾರದಿಂದ ಹೆಚ್ಚು ಅನುದಾನವನ್ನು ತಂದು ನಗರದ ಅಭಿವೃದ್ಧಿಗೆ ಸಹಕಾರ ನೀಡುತ್ತಾರೆ ಎಂದು ಭಾವಿಸಲಾಗಿತ್ತು. ಆದರೆ, ನಮ್ಮ ನಿರೀಕ್ಷೆಯಂತೆ ಅವರು ಅನುದಾನ ತರುವಲ್ಲಿ ವಿಫಲರಾದರು ಎಂದವರು ಹೇಳಿದರು.

ನಗರಸಭೆಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಶಾಸಕರು ಅಧಿಕಾರಿಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡು ಆಡಳಿತ ನಡೆಸಿದರೆ ಹೀಗೆ ಆಗುವುದು ಎಂದರು.

ನಾವು ಮಾತು ಕೊಟ್ಟಂತೆ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರವನ್ನು ಬಿಟ್ಟುಕೊಡುತ್ತಿದ್ದು, ಫೆ. 28ರ ಸೋಮವಾರ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಾದ ಕಾಂಗ್ರೆಸ್ ಪಕ್ಷದ ಎಂ.ಎಸ್.ಬಾಬುಲಾಲ್ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡುತ್ತಾರೆ ಎಂದು ಘೋಷಣೆ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ನಗರಸಭೆ ಅಧ್ಯಕ್ಷರಾದ ರತ್ನ ಉಜ್ಜೇಶ್, ಸದಸ್ಯರಾದ ಆರ್.ಸಿ.ಜಾವಿದ್, ದಿನೇಶ್ ಬಾಬು, ಪಿ.ಎನ್.ವಿರೂಪಾಕ್ಷ, ಬಿ.ಅಲ್ತಾಫ್ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಪೋಲಿಯೋ ಭಾನುವಾರ 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ



ದಾವಣಗೆರೆ ತಾಲ್ಲೂಕಿನಲ್ಲಿ ಇಂದಿನಿಂದ ಮಾರ್ಚ್ 2 ರ ವರೆಗೆ ನಾಲ್ಕು ದಿನಗಳ ಕಾಲ, ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇಂದಿನ ದಿನವನ್ನು ಪೋಲಿಯೋ ಭಾನುವಾರವನ್ನಾಗಿ ಆಚರಿಸಿ, ತಾಲ್ಲೂಕಿನ 423 ಲಸಿಕಾ ಕೇಂದ್ರಗಳಲ್ಲಿಯೂ 5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕಲಾಗುವುದು ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ತಿಳಿಸಿದ್ದಾರೆ.

ಇಂದಿನಿಂದ ಮಾರ್ಚ್ 2 ರವರೆಗೆ ತಾಲ್ಲೂಕಿನ ಐದು ವರ್ಷದೊಳಗಿನ 70375 ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಗುರಿಯನ್ನು ಹಾಕಿಕೊಳ್ಳಲಾಗಿದ್ದು, ಲಸಿಕಾ ಕಾರ್ಯಕ್ರಮದ ಮೊದಲ ದಿನವಾಗಿರುವ ಇಂದಿನ ದಿನವನ್ನು ಪೋಲಿಯೋ ದಿನವನ್ನಾಗಿ ಆಚರಿಸಿ, ಅಂದು ತಾಲ್ಲೂಕಿನ 423 ಲಸಿಕಾ ಕೇಂದ್ರಗಳಲ್ಲಿಯೂ ಮಕ್ಕಳಿಗೆ ಲಸಿಕೆ ಹಾಕಿ, ಮೊದಲ ದಿನದಂದೇ ಶೇ. 90 ರಷ್ಟು ಗುರಿ ಸಾಧಿಸುವ ಉದ್ದೇಶ ಹೊಂದಲಾಗಿದೆ. ಉಳಿದ ಮಕ್ಕಳಿಗೆ ಮನೆ ಮನೆ ಭೇಟಿ ನೀಡಿ ನಮ್ಮ ತಂಡವು ಲಸಿಕೆ ನೀಡಲಿದೆ.

ಮಕ್ಕಳಿಗೆ ಮನೆ ಮನೆ ಭೇಟಿ, ಲಸಿಕಾ ಕೇಂದ್ರಗಳು ಹಾಗೂ ಸಂಚಾರಿ ತಂಡ ಸೇರಿದಂತೆ ಒಟ್ಟು 444 ತಂಡಗಳನ್ನು ರಚಿಸಲಾಗಿದ್ದು, ಒಟ್ಟು 860 ಲಸಿಕಾಕರ್ತರು, 85 ಆರೋಗ್ಯ ಮೇಲ್ವಿಚಾರಕರು ಕ್ಷೇತ್ರದಲ್ಲಿ ಕಾರ್ಯನಿರ್ವಸಲಿದ್ದಾರೆ. ತಾಲ್ಲೂಕು ವ್ಯಾಪ್ತಿಯಲ್ಲಿನ ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತವಾಗದಂತೆ ಎಚ್ಚರ ವಹಿಸಲಾಗುವುದು. ಅಲೆಮಾರಿ ಕುಟುಂಬಗಳು, ಇಟ್ಟಿಗೆ ಭಟ್ಟಿ, ಸ್ಲಂಗಳು ಮುಂತಾದ ಪ್ರದೇಶಗಳಲ್ಲಿನ 5 ವರ್ಷದೊಳಗಿನ ಮಕ್ಕಳಿಗೂ ಸಹ ತಪ್ಪದೆ ಲಸಿಕೆ ಹಾಕಲು ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿಗಳು ವಿವರಿಸಿದ್ದಾರೆ.

# ಕುಣೆಬೆಳಕೆರೆ: ರಂಭಾಪುರಿ ಶ್ರೀಗಳ ಅಡ್ಡ ಪಲ್ಲಕ್ಕಿ ಉತ್ಸವ



ಮಲೇಬೆನ್ನೂರು,ಫೆ.26- ಸಮೀಪದ ಕುಣೆಬೆಳಕೆರೆ ಗ್ರಾಮದಲ್ಲಿ ಶುಕ್ರವಾರ ಜರುಗಿದ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಮಹಾದ್ವಾರ ಉದ್ಘಾಟನೆ ಮತ್ತು ಗೋಪುರದ ಕಳಸಾರೋಹಣ ಸಮಾರಂಭದ ಅಂಗವಾಗಿ ಹಮ್ಮಿಕೊಂಡಿದ್ದ ಶ್ರೀಮದ್ ರಂಭಾಪುರಿ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಉತ್ಸವವು ವಿವಿಧ ಕಲಾ ಮೇಳ ಮತ್ತು ಪೂರ್ಣ ಕುಂಭದೊಂದಿಗೆ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು .

# ಮೇಕೆದಾಟು ಪಾದಯಾತ್ರೆ ನಾಳೆಯಿಂದ ಪುನರಾರಂಭ

ಬೆಂಗಳೂರು, ಫೆ. 26- ನಗರದ ನಾಗರಿಕರಿಗೆ ಕುಡಿಯುವ ನೀರು ಪೂರೈಸಲು, ಕಾವೇರಿ ಪ್ರದೇಶದ ರೈತರನ್ನು ಬದುಕಿಸಲು ನೀರಿಗಾಗಿ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೇಕೆದಾಟಿನಿಂದ ರಾಮನಗರದವರೆಗೆ ಪಾದಯಾತ್ರೆ ಆರಂಭಿಸಿದ್ದೆವು, ಕೋವಿಡ್ ಮೂರನೇ ಅಲೆ ಸಂದರ್ಭದಲ್ಲಿ ಜನರ ಆರೋಗ್ಯ ಹಾಗೂ ಕೋರ್ಟ್ ಆದೇಶಕ್ಕೆ ಗೌರವವಾಗಿ ಪಾದಯಾತ್ರೆ ನಿಲ್ಲಿಸಿದ್ದೆವು, ಈಗ ಎಲ್ಲಿ ನಿಲ್ಲಿಸಿದ್ದೇವೋ ಅಲ್ಲಿಂದ ಮತ್ತೆ ಆರಂಭಿಸುತ್ತಿದ್ದೇವೆ ಎಂದರು.

ಪಾದಯಾತ್ರೆ ನಾಳೆ ಪುನಃ ಆರಂಭವಾಗಿ ಮಾರ್ಚ್ 3 ರ ಮಧ್ಯಾಹ್ನ ಪಾದಯಾತ್ರೆ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನ ತಲುಪಲಿದೆ, ಅಂದು ಸಭೆ ನಡೆಸಲಾಗುವುದು.

# 41, 43ನೇ ವಾರ್ಡಿನಲ್ಲಿ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ



ದಾವಣಗೆರೆ, ಫೆ.26- ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅನುದಾನದಡಿ ಅಂದಾಜು 2.23 ಕೋಟಿ ರೂ. ಮೊತ್ತದಲ್ಲಿ 41 ಮತ್ತು 43ನೇ ವಾರ್ಡಿನಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಅಭಿವೃದ್ಧಿ ಕಾಮಗಾರಿಗೆ ಸಂಸದ ಜಿ.ಎಂ.ಸಿದ್ದೇಶ್ವರ ಶಂಕುಸ್ಥಾಪನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಶಾಸಕ ಎಸ್.ಎ.ರವೀಂದ್ರನಾಥ್, ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ್, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಮಾಜಿ ಶಾಸಕ ಬಸವರಾಜ್ ನಾಯ್ಕ್, ಉಪ ಮಹಾಪೌರರಾದ ಶ್ರೀಮತಿ ಗಾಯತ್ರಿಬಾಯಿ ಖಂಡೋಜಿರಾವ್, ದೂಡಾ ಸದಸ್ಯರುಗಳಾದ ಗೌರಮ್ಮ ಪಾಟೀಲ್, ಮಾರುತಿರಾವ್ ಘಾಟ್ಗೆ, ಆರ್.ಲಕ್ಷ್ಮಣ ಮತ್ತು ಪಾಲಿಕೆ ಸದಸ್ಯರಾದ ಗೀತಾ ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಮಲೇಬೆನ್ನೂರಿನಲ್ಲಿ ಇಂದು ಪರವು

ಪಟ್ಟಣದ ಜಿಗಳಿ ರಸ್ತೆಯಲ್ಲಿರುವ ಶ್ರೀ ಮೈಲಾರ ಲಿಂಗೇಶ್ವರ ಶಿಬಾರಕಟ್ಟೆ ಮತ್ತು ಶ್ರೀ ಗಂಗಮಾಳಮ್ಮ ದೇವರುಗಳ ಪ್ರತಿಷ್ಠಾಪನೆಯಾಗಿ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 12ನೇ ವರ್ಷದ ವಾರ್ಷಿಕೋತ್ಸವ ಹಾಗೂ ಪರವು ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 7 ಗಂಟೆಗೆ ಗಂಗಾ ಪೂಜೆ, ಭಂಡಾರದ ಅರ್ಚನೆ ಮತ್ತು 11ಕ್ಕೆ ಅಭಿಷೇಕ, ಮಂಗಳಾರತಿ ನಂತರ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಅಧ್ಯಕ್ಷ ಎಂ.ಮೈಲಾರಪ್ಪ ತಿಳಿಸಿದ್ದಾರೆ.

# ರಾಜ್ಯಮಟ್ಟದ ಫುಟ್‌ಬಾಲ್ ಪಂದ್ಯ

ದಾವಣಗೆರೆ, ಫೆ.26- ದೇವನಗರಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದಿಂದ ಶಿವನಹಳ್ಳಿ ರಮೇಶ್ ಹುಟ್ಟುಹಬ್ಬದ ಅಂಗವಾಗಿ ಮಾರ್ಚ್ 1ರಂದು ರಾಜ್ಯ ಮಟ್ಟದ ಟೈಗರ್-5 ಫುಟ್‌ಬಾಲ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ. ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ತಂಡಕ್ಕೆ 10,001 ರೂ, ದ್ವಿತೀಯ 5,001 ರೂ, ನಗದನ್ನು ಬಹುಮಾನ ನೀಡಲಾಗುತ್ತಿದ್ದು, ಹೊರ ಜಿಲ್ಲೆಗಳಿಂದ ಭಾಗವಹಿಸಿದ ಕ್ರೀಡಾಪಟುಗಳಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಸಂಘದ ಗೌರವಾಧ್ಯಕ್ಷ ಶಿವನಹಳ್ಳಿ ರಮೇಶ್ ತಿಳಿಸಿದ್ದಾರೆ.

8ನೇ ವರ್ಷದ ಪುಣ್ಯಸ್ಮರಣೆ
ನಿನ್ನೊಲುಮೆ ನಮಗಿರಲಿ ತಂದೆ...

ದಿ|| ಶ್ರೀ ಬಳ್ಳಾರಿ ಎಂ. ಬಸವರಾಜಪ್ಪ
ನೀವು ನಮ್ಮನ್ನಗಲಿ ಇಂದಿಗೆ 8 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,
ಶ್ರೀಮತಿ ದೇವೀರಮ್ಮ ಬಸವರಾಜಪ್ಪ ಮತ್ತು ಮಕ್ಕಳು ಹಾಗೂ ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಬಂಧು-ಮಿತ್ರರು, ಕಡ್ಲೆಬಾಳು.
ಮೊ. : 86603 15828

# ಭಾರತದ ರಾಯಭಾರಿ ಬೆಂಬಲ ಕೇಳಿದ ಉಕ್ರೇನ್ ಅಧ್ಯಕ್ಷ

ನವದಹೆಲಿ, ಫೆ. 26 – ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್‌ಸ್ಕಿ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜೊತೆ ಮಾತನಾಡಿದ್ದು, ವಿಶ್ವಸಂಸ್ಥೆಯಲ್ಲಿ ರಾಜಕೀಯ ಬೆಂಬಲ ಕೋರಿದ್ದಾರೆ. ಈ ವಲಯದಲ್ಲಿ ಶಾಂತಿ ನೆಲೆಸಲು ಭಾರತ ತನ್ನ ಕೊಡುಗೆ ನೀಡಲು ಸಿದ್ಧವಿದೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

ಸಂಘರ್ಷದಲ್ಲಿ ಸಾವು - ನೋವುಗಳು ಉಂಟಾಗಿರುವ ಬಗ್ಗೆ ಪ್ರಧಾನಿ ಮೋದಿ ತೀವ್ರ ನೋವು ವ್ಯಕ್ತಪಡಿಸಿದ್ದಾರೆ ಎಂದು ಪ್ರಧಾನ ಮಂತ್ರಿ ಕಚೇರಿ ಹೇಳಿಕೆಯಲ್ಲಿ ತಿಳಿಸಲಾಗಿದೆ. ವಿದ್ಯಾರ್ಥಿಗಳೂ ಸೇರಿದಂತೆ ಉಕ್ರೇನ್‌ನಲ್ಲಿ ರುವ ಭಾರತೀಯ ನಾಗರಿಕರ ಸುರಕ್ಷತೆ ಬಗ್ಗೆಯೂ ಮಾತನಾಡಿರುವ ಪ್ರಧಾನಿ ಮೋದಿ, ತ್ವರಿತವಾಗಿ ಹಾಗೂ ಸುರಕ್ಷಿತವಾಗಿ ನಾಗರಿಕರನ್ನು ವಾಪಸ್ ಕರೆ ತರುವ ಬಗ್ಗೆ ಸೌಲಭ್ಯ ಕಲ್ಪಿಸಲು ಕೇಳಿದ್ದಾರೆ. ತಕ್ಷಣವೇ ಹಿಂಸೆ ನಿಲ್ಲಬೇಕು ಹಾಗೂ ಮಾತುಕತೆಗೆ ವಾಪಸ್ಸಾಗಬೇಕು ಎಂಬ ನಿಲುವನ್ನು ಮೋದಿ ಪುನರುಚ್ಚರಿಸಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ರಷ್ಯಾ ದಾಳಿ ಕುರಿತು ಮಾತನಾಡಿರುವ ಜೆಲೆನ್‌ಸ್ಕಿ, ದಾಳಿಯನ್ನು ಹಿಮ್ಮೆಟ್ಟಿಸಲಾಗುತ್ತಿದೆ. ಲಕ್ಷಕ್ಕೂ ಹೆಚ್ಚು ದಾಳಿಕೋರರು ನಮ್ಮ ನೆಲದಲ್ಲಿದ್ದಾರೆ. ನಿವಾಸಿ ಕಟ್ಟಡಗಳ ಮೇಲೆ ಅವರು ದಾಳಿ ನಡೆಸುತ್ತಿದ್ದಾರೆ. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ರಾಜಕೀಯ ಬೆಂಬಲ ಕೋರಿದ್ದೇವೆ. ಜೊತೆಯಾಗಿ ದಾಳಿಕೋರರನ್ನು ಎದುರಿಸಬೇಕಿದೆ ಎಂದು ಹೇಳಿದ್ದಾರೆ.

ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :
ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001. 96861 95327

WE ARE HIRING
RICHTON FURNITURES
LIVE THE LUXURY
Sales Managers
Product Assembler (Furniture)
WALK IN INTERVIEW
TIME : 12 PM
Both Male / Female Candidates Can Attend.
Address : # 1208, Nijalingappa Layout, Beside Kake walk, Davangere.
Ph. : 63619 90297




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte